ಆರ್ಬಿಟ್ ಸಂಸ್ಥೆ, ಹುಮನಾಬಾದ ಮತ್ತು

ಸೇವಾ ಸಂಗಮ ಸಮಾಜ ಸೇವಾ ಸಂಸ್ಥೆ, ಕಲಬುರಗಿ

# ಸೇವಾವಾಣಿ

## ಜುಲೈ 2024








July 2024

## “ಆರ್ಬಿಟ್ ಸಂಸ್ಥೆಯ ವತಿಯಿಂದ ಹುಮ್ನಾಬಾದ್ ಪಟ್ಟಣದಲ್ಲಿ ವಿಶ್ವ ಪರಿಸರ ದಿನ ಆಚರಣೆ”

ಆರ್ಬಿಟ್ ಸಂಸ್ಥೆಯು ಬೀದರ್ ಜಿಲ್ಲೆಯಾದ್ಯಂತ ಹಲವಾರು ಸಮಾಜ ಸೇವೆಯ ಕಾರ್ಯಗಳನ್ನು ಮಾಡುತ್ತಿದೆ. ಪರಿಸರದ ಕುರಿತು ಕಾಳಜಿ ವಹಿಸಿ ಜನರಲ್ಲಿ ಜಾಗೃತಿ ಮೂಡಿಸಲು ಶಾಲಾ ಮಕ್ಕಳೊಂದಿಗೆ ಜಾತ ಮೂಲಕ, ಹುಮ್ನಾಬಾದ್ ಪಟ್ಟಣದ ಪ್ರಮುಖ ಬೀದಿಗಳಲ್ಲಿ ವಿಶ್ವ ಪರಿಸರ ದಿನಾಚರಣೆ ಆಚರಿಸಲಾಯಿತು. ಆರ್ಬಿಟ್ ಸಂಸ್ಥೆಯ ವತಿಯಿಂದ ಹುಮ್ನಾಬಾದ್ ಪಟ್ಟಣದ ಹಳೆ ತಹಸೀಲ್ ಕಚೇರಿಯಿಂದ ಹೊಸ ತಹಶೀಲ್ ಕಚೇರಿಯವರೆಗೆ ಜಾತಾ ಮೂಲಕ ಪರಿಸರದ ಮಹತ್ವ ಕುರಿತು ಘೋಷಣೆ ಕೂಗುತ್ತಾ, ಪರಿಸರದ ಹಾಡುಗಳನ್ನು ಹೇಳಿ ಜನರಲಿ ಜಾಗೃತಿ ಮೂಡಿಸಲಾಯಿತು. ಪರಿಸರ ಸಂರಕ್ಷಣೆಯು ಕೇವಲ ಸರಕಾರದ ಕೆಲಸವಲ್ಲ, ಪ್ರತಿಯೊಬ್ಬ ನಾಗರಿಕರು ಪರಿಸರ ಸಂರಕ್ಷಣೆಯ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು. ಇತ್ತೀಚಿನ ದಿನಗಳಲ್ಲಿ ಜಾಗತಿಕ ತಾಪಮಾನ ಅಧಿಕವಾಗುತ್ತಿರುವುದು ನಮ್ಮೆಲ್ಲರ ಗಮನಕ್ಕೆ ಬರುತ್ತಿದೆ, ಮುಂದಿನ ಪೀಳಿಗೆಗೆ ನಾವು ಉತ್ತಮವಾದ ಪರಿಸರವನ್ನು ಬಳುವಳಿಯಾಗಿ ನೀಡಬೇಕಾದರೆ ಇಂದೇ ಪ್ರತಿಯೊಬ್ಬರು ಜಾಗೃತರಾಗಿ ವರ್ಷಕ್ಕೆ ಒಂದು ಮರವನ್ನು ನೆಡುವುದಾಗಿ ಪ್ರತಿಜ್ಞೆ ಮಾಡಬೇಕಾಗಿದೆ. ಎಂದು ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್ ರವರು ಜನರಲ್ಲಿ ಮನವಿ ಮಾಡಿದರು. “ಮನೆಗೊಂದು ಮರ ಊರಿಗೊಂದು ವನ” ಎಂಬಂತೆ ಪರಿಸರ ಸಂರಕ್ಷಣೆ ತಮ್ಮ ಜೀವನದ ಭಾಗವಾಗಿ ಮಾಡಿಕೊಳ್ಳಬೇಕು. ಮಣ್ಣಿನ ಮಾಲಿನ್ಯಕ್ಕೆ ಪ್ಲಾಸ್ಟಿಕ್ ಕಾರಣಿಭೂತವಾಗಿದ್ದು, ಜನರು ಸಾಧ್ಯವಾದಷ್ಟು ಪ್ಲಾಸ್ಟಿಕ್ ಬಳಕೆಯನ್ನು ತಗ್ಗಿಸಬೇಕು, ದಿನನಿತ್ಯದ ಜೀವನದಲ್ಲಿ ಜೈವಿಕ ವಸ್ತುಗಳನ್ನು ಬಳಸುವ ಮೂಲಕ ಪರಿಸರದ ರಕ್ಷಣೆಗೆ ಮುಂದಾಗಬೇಕು ಎಂದು ಹುಮ್ನಾಬಾದ್ ತಾಲೂಕಿನ ತಹಶೀಲ್ದಾರರಾದ ಶ್ರೀಮತಿ ಅಂಜುಮ ತಬಸ್ಸುಮ ಕರೆ ನೀಡಿದರು. ಷದನ್ ಶಾಲೆಯ ಮುಖ್ಯಸ್ಥರಾದ ಮಹಮ್ಮದ್ ಜಾಕಿರ್ ಹುಸೇನ್ ಅವರು ಮಾತನಾಡಿ, ಪರಿಸರವನ್ನು ಮಾನವನು ತನ್ನ ದುರಾಸೆಯಿಂದಾಗಿ ಹಸಿರು ಕಾಡನ್ನು ಕಡಿದು ಕಾಂಕ್ರೀಟ್ ಕಾಡು ಬೆಳೆಸುತ್ತಿದ್ದಾನೆ, ಪರಸ್ಥಿತಿ ಇನ್ನೂ ಹದಗೆಡುವ ಮುಂಚೆ ಎಲ್ಲರೂ ಎಚ್ಚೆತ್ತುಕೊಂಡು ಹಸಿರೀಕರಣ ಮಾಡುವ ಕಾಯಕದಲ್ಲಿ ನಿರತವಾಗುವುದು ಇಂದಿನ ತುರ್ತು ಅಗತ್ಯವಾಗಿದೆ ಎಂದು ತಿಳಿಸಿದರು. ಪರಿಸರದ ಅರಿವಿನ ಜಾತ ಕಾರ್ಯಕ್ರಮದಲ್ಲಿ  ಷದನ ಶಾಲೆಯ ವಿದ್ಯಾರ್ಥಿಗಳು, ತಹಶೀಲ್ ಕಚೇರಿಯ ಸಿಬ್ಬಂದಿ ವರ್ಗದವರು, ಪೊಲೀಸ್ ಇಲಾಖೆಯಿಂದ ಶ್ರೀ ಅಶೋಕ್ ಕುಮಾರ್ ಎ.ಎಸ್.ಐ ಸ್ವಸಹಾಯ ಸಂಘದ ಮಹಿಳೆಯರು ಹಾಗೂ ಆರ್ಬಿಟ್ ಸಂಸ್ಥೆಯ ಸಿಬ್ಬಂದಿ ವರ್ಗದವರು ಪಾಲ್ಗೊಂಡಿದ್ದರು.



ಪೂಜ್ಯ ರಾಬರ್ಟ್ ಮಿರಾಂಡಾ
ಗುಲಬರ್ಗಾ ಧರ್ಮಾಧ್ಯಕ್ಷರು

ವಂ. ಫಾ॥ ವಿಕ್ಟರ್ ವಾಸ್
ನಿರ್ದೇಶಕರು, ಆರ್ಬಿಟ್ ಮತ್ತು
ಸೇವಾ ಸಂಗಮ ಸಂಸ್ಥೆ, ಕಲಬುರಗಿ










orbit humnabad
Orbit Bidar
@orbitbidar330
www.orbitbidar.in
+91 8660968063
+91 8971119914
Orbitbidar93@gmail.com

## “ನವಜೀವನ (ಎ.ಪಿ.ಎಫ್) ಕಾರ್ಯಕ್ರಮ”

### “ನರೇಗಾ ಕೂಲಿ ಕಾರ್ಮಿಕರಿಗೆ ಮಾನಸಿಕ ಅಸ್ವಸ್ಥರ ಬಗ್ಗೆ ಮಾಹಿತಿ”



ಜೂನ್ 04.2024 ರಂದು ಹುಮ್ನಾಬಾದ್ ತಾಲೂಕಿನ ಹುಣಸಗೇರ ಗ್ರಾಮದ ನರೇಗಾ ಕೂಲಿ ಕಾರ್ಮಿಕರಿಗೆ ಮಾನಸಿಕ ಅಸ್ವಸ್ಥರ ಬಗ್ಗೆ ಮಾಹಿತಿ ನಿಡಲಾಯಿತು. ಸಂಪನ್ಮೂಲ ವ್ಯಕ್ತಿಯಾಗಿ ನವಜೀವನ ಕಾರ್ಯಕ್ರಮದ ಕಾರ್ಯಕರ್ತೆ ಶ್ರೀಮತಿ ಮಹಾದೇವಿ ರವರು ಮಾನಸಿಕ ಕಾಯಿಲೆಗೆ ಕಾರಣ, ಮಾನಸಿಕ ಅಸ್ವಸ್ಥರ ಲಕ್ಷಣಗಳು, ಹಾಗೂ ಇದಕ್ಕೆ ಇರುವ ಉಚಿತ ಸೂಕ್ತ ಚಿಕಿತ್ಸೆಯ ಕುರಿತು ತಿಳಿಸಿದರು. ನಂತರ ಸರ್ಕಾರದಿಂದ ಸಿಗುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿದರು. ಸರಕಾರಿ ಆರೋಗ್ಯ ಕೇಂದ್ರಗಳಿಂದ ಉಚಿತ ಚಿಕಿತ್ಸೆ, ಯು.ಡಿ.ಐ.ಡಿ ಕಾರ್ಡ್, ರೇಷನ್ ಕಾರ್ಡ್, ಬಸ್ ಪಾಸ್, ಮಾಶಾಸನ, ಹೀಗೆ ಅನೇಕ ಸರ್ಕಾರಿ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು. ಮಾನಸಿಕ ಕಾಯಿಲೆಗೆ ಉಚಿತವಾಗಿ ಚಿಕಿತ್ಸೆಯನ್ನು ಸರಕಾರವು ಒದಗಿಸಿದ್ದು, ಮಾನಸಿಕ ಕಾಯಿಲೆಯಿಂದ ಬಳಲುತ್ತಿರುವವರು ಮನೋವೈದ್ಯರನ್ನು ಸಂಪರ್ಕಿಸಿ ಸೂಕ್ತ ಚಿಕಿತ್ಸೆ ಪಡೆಯಬೇಕೆಂದು ತಿಳಿಸಿದರು. ನಿಮ್ಮ ಗ್ರಾಮದಲ್ಲಿ ಮಾನಸಿಕ ಕಾಯಿಲೆಯಿಂದ ಬಳಲುತ್ತಿರುವವರು ಕಂಡು ಬಂದಲ್ಲಿ, ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಿಗೆ ಮಾಹಿತಿ ನೀಡುವ ಮೂಲಕ ಸೂಕ್ತ ಮಾರ್ಗದರ್ಶನ ಪಡೆಯಬೇಕು, ಪ್ರತಿ ಬುಧವಾರ ಹುಮ್ನಾಬಾದ ಸರಕಾರಿ ಆಸ್ಪತ್ರೆಯಲ್ಲಿ “ಜಿಲ್ಲಾ ಮಾನಸಿಕ ಆರೋಗ್ಯ ಶಿಬಿರ” ನಡೆಯುತ್ತಿದ್ದು, ಈ ಶಿಬಿರದಲ್ಲಿ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳುವಂತೆ ಮನವಿ ಮಾಡಿದರು. ಈ ಅರಿವಿನ ಕಾರ್ಯಕ್ರಮದಲ್ಲಿ ಒಟ್ಟು 36 ಜನ ನರೇಗಾ ಕೂಲಿ ಕಾರ್ಮಿಕರು ಭಾಗವಹಿಸಿ ಮಾಹಿತಿ ಪಡೆದುಕೊಂಡರು.



ಅಲ್ಲೂರು ಗ್ರಾಮದ ಉದ್ಯೋಗ ಖಾತ್ರಿ ಕೆಲಸವನ್ನು ನಿರ್ವಹಿಸುವ 80 ಜನರಿಗೆ ಮಾನಸಿಕ ಕಾಯಿಲೆಗಳ ಕುರಿತು ಮಾಹಿತಿಯನ್ನು ನೀಡಲಾಯಿತು. ಜೊತೆಗೆ ಮಾನಸಿಕ ರೋಗದ ಗುಣಲಕ್ಷಣಗಳಾದ, ಕಾರಣವಿಲ್ಲದೆ ಅಳುವುದು, ನಗುವುದು, ಏಕಾಂಗಿಯಾಗಿರುವುದು, ಯಾರ ಜೊತೆ ಬೇರೆಯದೆ ಇರುವುದು, ನಿದ್ದೆ ಬಾರದೆ ಇರುವುದು, ಕೆಲಸದಲ್ಲಿ ನಿರಾಸಕ್ತಿ, ವಿಚಿತ್ರ ನಡುವಳಿಕೆ. ಇಂತಹ ಲಕ್ಷಣಗಳಿಂದ ಬಳಲುತ್ತಿರುವ ವ್ಯಕ್ತಿಗಳನ್ನು ನೀವು ಕಂಡಲ್ಲಿಮಾನವಿಯತೆಯ ದೃಷ್ಟಿಯಿಂದ ಹಾಗೂ ಸಮಾಜದ ಉತ್ತಮ ಬೆಳವಣಿಗೆಗಾಗಿ ಚಿಕಿತ್ಸೆ ಪಡೆಯುವುದಕ್ಕಾಗಿ ಸಮಾಜದ ಜನರು ಸಹಕರಿಸಬೇಕು ಎಂದು ವಿನಂತಿಸಲಾಯಿತು. ಆರ್ಬಿಟ್ ಸಂಸ್ಥೆಯ ಮಾನಸಿಕ ಆರೋಗ್ಯ ಸಹಾಯವಾಣಿಗೆ ಕರೆ ಮಾಡುವುದರೊಂದಿಗೆ ಸೂಕ್ತ ಮಾರ್ಗದರ್ಶನ ಪಡೆಯಬಹುದು ಎಂದು ತಿಳಿಸಲಾಯಿತು. ಈ ಮಾಹಿತಿ ಕಾರ್ಯಕ್ರಮದಲ್ಲಿ 80 ಜನರು ಭಾಗವಹಿಸಿ ಮಾನಸಿಕ ಅಸ್ವಸ್ಥತೆಯ ಮಾಹಿತಿಯನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾದರು, ಪಾಲ್ಗೊಂಡ ಎಲ್ಲರೂ ಈ ಮಾಹಿತಿಯನ್ನು ತಮ್ಮ ನೆರೆಯವರಲ್ಲಿ ಹಾಗೂ ಬಂಧು ಬಾಂಧವರಲ್ಲಿ ಹಂಚಿಕೊಂಡು ಸಹಕರಿಸುತ್ತೇವೆಂದು ಮಾತು ಕೊಟ್ಟರು .

### “ವಿಶೇಷ ವಿಕಲಚೇತನರ ಸಂಘದ ಸಭೆ”



ಜೂನ್ 4.2024 ರಂದು ಹುಮ್ನಾಬಾದ್ ತಾಲೂಕಿನ ನಂದಗಾವ್ ಗ್ರಾಮದಲ್ಲಿ ಸೇವಂತಿ ವಿಶೇಷ ವಿಕಲಚೇತನರ ಸಂಘದ ಸಭೆಯನ್ನು ನಡೆಸಲಾಯಿತು. ಈ ಸಭೆಯಲ್ಲಿ ನವಜೀವನ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಪ್ರೀತಿ ಹಾಗೂ ಆಪ್ತ ಸಮಾಲೋಚಕರಾದ ಶ್ರೀ ಅರುಣ್ ಕೋಟೆ ರವರು ಭಾಗವಹಿಸಿದರು. ಮಾನಸಿಕ ಅಸ್ವಸ್ಥರಿಗೆ ಇರುವ ಸರಕಾರಿ ಸೌಲತ್ತುಗಳಾದ ಯುಡಿಐಡಿ ಕಾರ್ಡ್, ಬಸ್ ಪಾಸ್, ಪಂಚಾಯತಿನ 5 ಪರ್ಸೆಂಟ್ ಅನುದಾನ ಗಳ ಕುರಿತು ಮಾಹಿತಿಯನ್ನು ನೀಡಿ, ಅವುಗಳನ್ನು ಅರ್ಹ ಫಲಾನುಭವಿಗಳು ಹೇಗೆ ಪಡೆದುಕೊಳ್ಳಬಹುದು ಎಂಬುದರ ಕುರಿತು ಮಾರ್ಗದರ್ಶನವನ್ನು ನೀಡಲಾಯಿತು. ಈ ಸಭೆಯಲ್ಲಿ ಒಟ್ಟು ಐದು ಫಲಾನುಭವಿಗಳು ಭಾಗವಹಿಸಿ ಮಾಹಿತಿಯನ್ನು ಪಡೆದುಕೊಂಡು ಮುಂದಿನ ದಿನಗಳಲ್ಲಿ ಸರಕಾರಿ ಸೌಲಭ್ಯಗಳ ಸದುಪಯೋಗ ಪಡೆದುಕೊಳ್ಳುವುದಾಗಿ ತಿಳಿಸಿದರು.

## “ಮಾನಸಿಕ ಅಸ್ವಸ್ಥರಿಗೆ ಹಾಗೂ ಪೋಷಕರಿಗೆ ಆಪ್ತ ಸಮಾಲೋಚನೆ”



ಜೂನ್ 17.2024 ರಂದು ಹುಮನಾಬಾದ್ ತಾಲೂಕಿನ, ಸೀತಾಳಗೇರಾ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಬೋತಗಿ ಗ್ರಾಮದ ನಿವಾಸಿ ಆಗಿರುವ, ಕುಮಾರಿ ಜಯಶೀಲಾ ತಂದೆ ಶಂಕ್ರಪ್ಪ ಇವರು ವಯಸ್ಸು 45, ಕಳೆದ 15 ವರ್ಷಗಳಿಂದ ಮಾನಸಿಕ ಕಾಯಿಲೆಗೆ ಒಳಗಾಗಿರುತ್ತಾರೆ. ಈ ಮುಂಚೆ ಅನೇಕ ಕಡೆ ಮಾಟ, ಮಂತ್ರ, ದೆವ್ವ, ಭೂತ ಹಿಡಿದಿದೆ ಎಂದು ಭಾವಿಸಿ ಮೂಡನಂಬಿಕೆಗೆ ಒಳಗಾಗಿದ್ದಂತ ಕುಟುಂಬ ಇವರದು. ಒಂದು ದಿವಸ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರು ಮನೆಯನ್ನು ಭೇಟಿ ಮಾಡಲು ಹೋದಾಗ, ಈ ಕುಟುಂಬದ ಬಗ್ಗೆ ಮಾಹಿತಿಯನ್ನು ಕಲೆ ಹಾಕಿದರು. ಸುಮಾರು ಒಂದುವರೆ ವರ್ಷಗಳಿಂದ ಪ್ರತಿ ತಿಂಗಳು ಮನೆ ಭೇಟಿ, ಕುಟುಂಬದ ಸದಸ್ಯರಭೇಟಿ, ಪೋಷಕರ ಭೇಟಿ, ಸಮುದಾಯ ಜನರ ಭೇಟಿ ಮಾಡುತ್ತಿದ್ದರು. ಮನವೊಲಿಸುವ ಪ್ರಯತ್ನ ನಿರಂತರವಾಗಿತ್ತು, ಸರಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಬರಲು ಹೇಳುತ್ತಿದ್ದರು. ಆದರೆ ಇವರು ಯಾವುದೇ ಚಿಕಿತ್ಸೆ ಇಲ್ಲದೆ ಮನೆಯಲ್ಲೇ ನೋಡಿಕೊಳ್ಳುತ್ತಿದ್ದರು. ಮಾರ್ಚ್ 21.2024 ರಂದು ಆಪ್ತ ಸಮಾಲೋಚಕರಾದ ಶ್ರೀ ರವಿ .ಜಿ ರವರು ಈ ಅಂಶಗಳನ್ನು ಗಮನಿಸಿ, ಇವರಿಗೆ ಆಪ್ತ ಸಮಾಲೋಚನೆ ಬಹಳ ಅಗತ್ಯವಾಗಿದೆ ಎಂದು ಪರಿಶೀಲನೆ ಮಾಡಿ, ಪರಿಸ್ಥಿತಿ ಕಂಡುಕೊಂಡು ಪೋಷಕರಿಗೆ ಮೊದಲ ಆದ್ಯತೆ ಆಪ್ತ ಸಮಾಲೋಚನೆ ನೀಡಬೇಕಾಗಿದೆ ಎಂದು ತಿಳಿದು ಪೋಷಕರಿಗೆ ಆಪ್ತ ಸಮಾಲೋಚನೆ ನೀಡಲಾಯಿತು. ಪೋಷಕರಿಗೆ ಚಿಕಿತ್ಸೆಯ ಮತ್ತು ಆಪ್ತ ಸಮಾಲೋಚನೆಯ ಬಗ್ಗೆ ಮಾಹಿತಿ ನೀಡಿದರು ಯಾವುದೇ ರೀತಿ ಬದಲಾವಣೆ ಆಗುವುದಿಲ್ಲ ಸರ್ ಎಂದು ಬೇಸರದ ಭಾವನೆ ವ್ಯಕ್ತಪಡಿಸುತ್ತಿದ್ದರು. ಮುಂದಿನ ದಿನಗಳಲ್ಲಿ ಕಾರ್ಯಕರ್ತರು ಅವರ ಮನವೊಲಿಸುವಲ್ಲಿ ಯಶಸ್ವಿಯಾಗಿ, ಇದರಿಂದ ಮಾಹಿತಿ ಪಡೆದ ಪೋಷಕರು ಬುದವಾರ ಮುಂಜಾನೆ 11 :00 ಗಂಟೆಗೆ ಮಾರ್ಚ್ 22.2024 ರಂದು ಸರಕಾರಿ ಆಸ್ಪತ್ರೆಯಲ್ಲಿ ಮೊದಲನೇ ಹಂತದ ಚಿಕಿತ್ಸೆಯನ್ನು ಪಡೆಯಲು ಜಯಶೀಲಾ ರವರನ್ನು ಕರೆದು ತಂದರು. ಮನೋವೈದ್ಯರು ಇವರನ್ನು ಗಮನಿಸಿ, ಸೂಕ್ತ ಚಿಕಿತ್ಸೆ ಮತ್ತು ಮಾತ್ರೆಗಳನ್ನು ನೀಡುತ್ತಾ ಬಂದರು. ತದನಂತರ ಫಲಾನುಭವಿ ನಿರಂತರ ಮಾತ್ರೆಗಳನ್ನು ಸೇವನೆ ಮಾಡುತ್ತಾ ಇದ್ದರು. ನವ ಜೀವನ ಕಾರ್ಯಕ್ರಮದ ಕಾರ್ಯಕರ್ತರಿಗಾಗಿ ಕ್ಷೇತ್ರ ಅಧ್ಯಯನ ದಲ್ಲಿ ತೊಡಗಿರುವಾಗ, ಎಪಿಡಿ ಸಂಸ್ಥೆಯ ಶ್ರೀ ಸಂತೋಷ್ ಮತ್ತು ಫಾದರ್ ವಿಜಯ್ ಕುಮಾರ್ ಭೇಟಿ ಮಾಡಿರುತ್ತಾರೆ. ದಿನಾಂಕ 10 ಜೂನ್ 2024 ರಂದು ನಿರಂತರ ಚಿಕಿತ್ಸೆಯಿಂದ ಮತ್ತು ಪೋಷಕರ ಸಹಕಾರ, ನಿರಂತರ ಆಪ್ತ ಸಮಾಲೋಚನೆಯಿಂದ ಈಗ ನಮ್ಮ ಮಗಳು ಗುಣಮುಖರಾಗುತ್ತಿದ್ದಾರೆ, ಇವರ ಗುಣಲಕ್ಷಣಗಳಲ್ಲಿ ಉತ್ತಮ ಬದಲಾವಣೆ ಕಾಣುತ್ತಿದ್ದೇವೆ ಎಂದು ಸಂಸ್ಥೆಯ ನಿರ್ದೇಶಕರಿಗೆ ಹಾಗೂ ನವ ಜೀವನ ಸಿಬ್ಬಂದಿ ವರ್ಗದವರಿಗೆ ಕೃತಜ್ಞತೆ ಸಲ್ಲಿಸಿದ್ದಾರೆ.



## “ಮಾನಸಿಕ ಅಸ್ವಸ್ಥರ ಸರ್ವೆ ಕಾರ್ಯ”



ಹುಮನಾಬಾದ್ ತಾಲೂಕಿನ ನಂದಗಾಂವ ಗ್ರಾಮದಲ್ಲಿ ಜೂನ್ 2024 ರಿಂದ ಸಮಾಜದಿಂದ ತಳಲ್ಪಟ್ಟ ಮಾನಸಿಕ ಅಸ್ವಸ್ಥರನ್ನು ಆರ್ಬಿಟ್ ಸಂಸ್ಥೆಯ ನವ ಜೀವನ ಕಾರ್ಯಕ್ರಮ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ಸರ್ವೆ ಕಾರ್ಯ ಮಾಡಲಾಗುತ್ತಿದೆ. ಮಾನಸಿಕ ಅಸ್ವಸ್ಥತೆಯಿಂದ ಸಮಾಜದಿಂದ ಹೊರಗುಳಿದವರನ್ನು, ಖಿನ್ನತೆಗೆ ಒಳಗಾಗಿದ್ದ ಜನರನ್ನು ಮುಖ್ಯ ವಾಹಿನಿಗೆ ತರಲು, ಚಿಕಿತ್ಸೆ ಪಡೆಯಲು ಪ್ರೇರಣೆ ಮಾಡುವದಲ್ಲದೆ, ಖಿನ್ನತೆಗೆ ಒಳಗಾಗಿದ್ದ ರೋಗಿಗಳನ್ನು ಮಾನಸಿಕ ಆಪ್ತ ಸಮಾಲೋಚನೆಗೆ ಒಳಪಡಿಸುವುದರ ಮುಖಾಂತರ ಅವರನ್ನು ಮುಖ್ಯ ವಾಹಿನಿಗೆ ತರಲಾಗುತ್ತಿದೆ ಹಾಗೂ ಇನ್ನಿತರ ಅಂಗವಿಕಲತೆ ಇರುವಂತವರನ್ನು ಗುರುತಿಸಿ ಮುಖ್ಯವಾಹಿನಿಗೆ ತಂದು, ವ್ಯವಸ್ಥಿತ ರೀತಿಯಲ್ಲಿ ಪುನರ್ವಸತಿಗೊಳಿಸಲು ಈ ಸರ್ವೆ ಕಾರ್ಯ ತುಂಬಾ ಸಹಕಾರಿ ಆಗಿರುತ್ತದೆ.



## "ಸಿಬ್ಬಂದಿ ವರ್ಗದವರಿಗೆ ಸಾಮರ್ಥ್ಯ ಬಲವರ್ಧನ ತರಬೇತಿ"



ಜೂನ್ 12.2024 ರಂದು ಹುಮ್ನಾಬಾದ್ ನಗರದ ಆರ್ಬಿಟ್ ಸಂಸ್ಥೆಯಲ್ಲಿ ನವಜೀವನ ಕಾರ್ಯಕ್ರಮ ಮತ್ತು ಅಜೀಮ್ ಪ್ರೇಮ್ ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ, ಸಿಬ್ಬಂದಿ ವರ್ಗದವರಿಗೆ ಸಾಮರ್ಥ್ಯ ಬಲವರ್ಧನ ತರಬೇತಿಯನ್ನು ನಡೆಸಲಾಯಿತು. ಈ ತರಬೇತಿ ಕಾರ್ಯಗಾರಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಎ.ಪಿ.ಡಿ ಸಂಸ್ಥೆಯ ವಿಭಾಗಿ ವ್ಯವಸ್ಥಾಪಕರಾದ ಶ್ರೀ ಸಂತೋಷ್ ರವರು ತರಬೇತಿಯನ್ನು ಉದ್ದೇಶಿಸಿ ಮಾತನಾಡಿ, ಅಂಗವಿಕಲರ ಸಂಘದ ಮಹತ್ವ ಕುರಿತು ವಿವರಿಸಿದರು. ಸಂಘಗಳ ಸಭೆ, ನಡವಳಿ ಮತ್ತು ಅದರ ಉದ್ದೇಶ ಕುರಿತು ಸಂಪೂರ್ಣ ಮಾಹಿತಿ ನೀಡಿದರು. ಗ್ರಾಮಮಟ್ಟದಲ್ಲಿ ಸಂಘಗಳ ಬಲವರ್ಧನೆ ಮಾಡುವ ಮೂಲಕ ಮುಂದಿನ ದಿನಗಳಲ್ಲಿ ತಾಲೂಕ ಹಾಗೂ ಜಿಲ್ಲಾ ಮಟ್ಟದ ಸಂಘಗಳನ್ನು ರಚಿಸುವ ಉದ್ದೇಶವುದೆ, ಈ ನಿಟ್ಟಿನಲ್ಲಿ ಕಾರ್ಯಕರ್ತರು ಜವಾಬ್ದಾರಿಯುತವಾಗಿ ಸಂಘಗಳ ಬಲವರ್ಧನೆಗಾಗಿ ಕಾರ್ಯನಿರ್ವಹಿಸುವಂತೆ ಸಲಹೆ ನೀಡಿದರು .ಈ ಕಾರ್ಯಕ್ರಮದಲ್ಲಿ ಒಟ್ಟು 10 ಜನ ಕಾರ್ಯಕರ್ತರು ಭಾಗವಹಿಸಿದ್ದರು.

## "ಕ್ಷೇತ್ರ ಆಧಾರಿತ ತರಬೇತಿ"



ಜೂನ್ 10.2024 ರಂದು ಹುಮ್ನಾಬಾದ್ ತಾಲೂಕಿನ ನಂದಗಾವ್ ಗ್ರಾಮದಲ್ಲಿ ಕ್ಷೇತ್ರ ಆಧಾರಿತ ತರಬೇತಿಯನ್ನು ಹಮ್ಮಿಕೊಳ್ಳಲಾಯಿತು. ಈ ತರಬೇತಿ ಕಾರ್ಯಗಾರಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಎ.ಪಿ.ಡಿ ಸಂಸ್ಥೆಯ ವಿಭಾಗಿಯ ವ್ಯವಸ್ಥಾಪಕರಾದ ಶ್ರೀ ಸಂತೋಷ್ ಅವರು ಭಾಗವಹಿಸಿ ನವಜೀವನ ಎ.ಪಿ.ಎಫ್ ಯೋಜನೆಯ ಕಾರ್ಯಕರ್ತರಿಗೆ ತರಬೇತಿಯನ್ನು ನೀಡಿದರು. ಗ್ರಾಮದ ಮಾನಸಿಕ ಅಸ್ವಸ್ಥರ ಪೋಷಕರ ಸಭೆಯಾದ ಸೇವಂತಿ ಸಂಘಕ್ಕೆ ಭೇಟಿ ನೀಡುವ ಮೂಲಕ ಕಾರ್ಯಕರ್ತರಿಗೆ ವಿಶೇಷ ಚೇತನರ ಸಂಘದ ಕಾರ್ಯವೈಕರಿ ಹಾಗೂ ಮುಂದಿನ ಗುರಿಯ ಕುರಿತು ವಿವರವಾಗಿ ತಿಳಿ ಹೇಳಿದರು. ಮುಂದಿನ ದಿನಗಳಲ್ಲಿ ಸಂಘದ ಸದಸ್ಯರು ತಮ್ಮ ಹಕ್ಕುಗಳಿಗಾಗಿ ಹೋರಾಡುವುದು ಹಾಗೂ ಸರಕಾರದಿಂದ ಸಿಗುವ ಸೌಲಭ್ಯಗಳಿಗಾಗಿ ಒಮ್ಮತದಿಂದ ಮುಂದೆ ಬಂದು ಸೌಲಭ್ಯಗಳನ್ನು ಪಡೆಯುವ ನಿಟ್ಟಿನಲ್ಲಿ ಏಕತೆಯನ್ನು ಹೊಂದಬೇಕೆಂದು ಎಂಬ ಸಲಹೆ ನೀಡಿದರು. ಈ ಸಂದರ್ಭದಲ್ಲಿ ಮಾನಸಿಕ ಅಸ್ವಸ್ಥರ ಪೋಷಕರಲ್ಲಿದ್ದ ಸಂದೇಹಗಳನ್ನು ನಿವಾರಿಸುತ್ತ, ಏಕತೆಯಲ್ಲಿ ಬಲವಿದೆ ಎಂಬ ಮೂಲ ಮಂತ್ರದ ಉದ್ದೇಶದ ಕುರಿತು ವಿವರಿಸಿದರು. ಇದೇ ಸಂದರ್ಭದಲ್ಲಿ ಬೀರಲಿಂಗೇಶ್ವರ ದೇವಸ್ಥಾನದಲ್ಲಿ ಮಾನಸಿಕ ಅಸ್ವಸ್ಥರು ಹಾಗೂ ಪೋಷಕರಿಂದ ಸಸಿ ನೆಡುವ ಮೂಲಕ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ನವಜೀವನ ಕಾರ್ಯಕ್ರಮದ ಸಂಯೋಜಕರು, ಆಪ್ತ ಸಮಾಲೋಚಕರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದು ಪ್ರತಿಯೊಂದು ಚಟುವಟಿಕೆಯ ಸ್ವ ಅನುಭವ ಪಡೆದುಕೊಂಡರು.

## "ಪ್ರಗತಿ ಪರಿಶೀಲನ ಸಭೆ"



ಜೂನ್ 25.2024 ರಂದು ಹುಮ್ನಾಬಾದ್ ನಗರದ ಆರ್ಬಿಟ್ ಸಂಸ್ಥೆಯ ಸಭಾಂಗಣದಲ್ಲಿ ಅಜೀಮ್ ಪ್ರೇಮ್ ಜಿ ಫೌಂಡೇಶನ್ ನ ಪ್ರತಿನಿಧಿಗಳಿಂದ ನವ ಜೀವನ ಕಾರ್ಯಕ್ರಮದ ಪ್ರಗತಿ ಪರಿಶೀಲನ ಸಭೆಯನ್ನು ನಡೆಸಲಾಯಿತು. ಕಾರ್ಯಕ್ರಮದ ಎಲ್ಲಾ ಸಿಬ್ಬಂದಿ ವರ್ಗದವರು ತಮ್ಮ ತಮ್ಮ ಕಾರ್ಯದ ವರದಿಯನ್ನು ಪ್ರತಿನಿಧಿಗಳೆದುರು ಪ್ರಸ್ತುತಪಡಿಸಿದರು. ಕ್ಷೇತ್ರದ ಕುರಿತು ಕಾರ್ಯಕರ್ತರೊಂದಿಗೆ ಪ್ರತಿನಿಧಿಗಳು ಸಮಾಲೋಚಿಸಿ ತಮ್ಮ ಅಮೂಲ್ಯವಾದ ಸೂಚನೆಗಳನ್ನು ನೀಡಿದರು. ಅಜೀಮ್ ಪ್ರೇಮ್ ಜಿ ಫೌಂಡೇಶನ್ ಪ್ರತಿನಿಧಿಗಳಾದ ಶ್ರೀ ಅನಿಲ್ ರಾಮ್ ಪ್ರಸಾದ್, ಶ್ರೀ ಮಹಾದೇವ್ ಮತ್ತು ಶ್ರೀ ಸಂಜು ಕುಮಾರ್ ದಾಖಲೆಗಳನ್ನು ಹಾಗೂ ಕಾರ್ಯಕ್ಷೇತ್ರ ಭೇಟಿ ನೀಡುವ ಮೂಲಕ ವರದಿ ಪರಿಶೀಲಿಸಿದರು. ಈ ವರದಿ ಪರಿಶೀಲನ ಸಭೆಯಲ್ಲಿ ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ವಂದನಿಯ ಫಾದರ್ ವಿಕ್ಟರ್ ವಾಸ್, ಯೋಜನೆಗಳ ಕಾರ್ಯ ವ್ಯವಸ್ಥಾಪಕರಾದ ಸಿಸ್ಟರ್ ವಿಲ್ಮಾ ಮ್ಯಾಥೂ, ನವ ಜೀವನ ಕಾರ್ಯಕ್ರಮದ ಸಂಯೋಜಕರು, ಆಪ್ತ ಸಮಾಲೋಚಕರು ಮತ್ತು ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು. ಅಜೀಮ್ ಪ್ರೇಮ್ ಜಿ ಫೌಂಡೇಶನ್ ನ ಪ್ರತಿನಿಧಿಗಳು ನಮ್ಮ ಕಾರ್ಯ ಯೋಜನೆಗಳನ್ನು ಪರಿಶೀಲನೆ ಮಾಡಿ ಸಂಸ್ಥೆಯನ್ನು ಅಭಿನಂದಿಸಿದರು.

# "ಮಹಿಳಾ ಸಬಲೀಕರಣ ಕಾರ್ಯಕ್ರಮ"

## "ಸಂವಿಧಾನಿಕ ಹಕ್ಕುಗಳ ಕುರಿತು ತರಬೇತಿ"



ಜೂನ್ 20.2024 ರಂದು ಕಲ್ವಾಡಿ ಗ್ರಾಮದಲ್ಲಿ ಸ್ಥಳೀಯ ಸಂಯೋಜಕರಾದ ಸಿಸ್ಟರ್ ಶೀಲ ಅವರು ಸ□ವಿಧಾನಿಕ ಹಕ್ಕುಗಳ ಕುರಿತು ತರಬೇತಿಯಲ್ಲಿ ಸಂಘದ ಮಹಿಳೆಯರಿಗೆ ಸಂವಿಧಾನದ ಪ್ರಸ್ತಾವನೆ ವಿವರಿಸುವುದರೊಂದಿಗೆ ಭ್ರಾತತ್ವ ಭಾವನೆಯನ್ನು ಮೂಡಿಸಿದರು. ಬೇರೆ ದೇಶದ ಸಂವಿಧಾನ ಮತ್ತು ಭಾರತದ ದೇಶದ ಸಂವಿಧಾನಕ್ಕೆ ಇರುವ ವ್ಯತ್ಯಾಸಗಳನ್ನು ಕುರಿತು ಮಾಹಿತಿ ನೀಡುವ ಮೂಲಕ, ನಮ್ಮ ಸವಿಧಾನವು 18 ವರ್ಷದಿಂದ ಪುರುಷ ಮಹಿಳೆಯರಿಗೆ ಯಾವುದೇ ಭೇದ ಭಾವವಿಲ್ಲದೆ ಮತದಾನದ ಹಕ್ಕನ್ನು ಒದಗಿಸಿದೆ, ಇದು ನಮ್ಮ ಸಂವಿಧಾನದ ವೈಶಿಷ್ಟ ಎಂದು ತಿಳಿಸಿದರು. ನಂತರ ಭಾರತ ದೇಶ ಪ್ರಜಾಪ್ರಭುತ್ವದ ಸರಕಾರ ಎಂದರೆ ಜನರು ಜನರಿಗಾಗಿ ಜನರಿಗೋಸ್ಕರ ನಡೆಸುವ ಸರಕಾರವೇ ಪ್ರಜಾಪ್ರಭುತ್ವ ಸರಕಾರ ಎಂದು ಕರೆಯುತ್ತಾರೆ. ಇಲ್ಲಿ ಜನರೇ ಪ್ರಭುಗಳಾಗುತ್ತಾರೆ ಎಂದು ಮಹಿಳೆಯರಿಗೆ ಮನದಟ್ಟು ಮಾಡಿಸಿದರು. ನಮ್ಮ ಸಂವಿಧಾನವು ಹಲವಾರು ಹಕ್ಕುಗಳನ್ನು ಒದಗಿಸಿದೆ, ಅವುಗಳೆಂದರೆ ಬದುಕುವ ಹಕ್ಕು, ಭಾಗವಹಿಸುವ ಹಕ್ಕು, ಸ್ವಾತಂತ್ರದ ಹಕ್ಕು, ಶೋಷಣೆಯ ವಿರುದ್ಧ ಹಕ್ಕು ಹೀಗೆ ಮೂಲಭೂತ ಹಕ್ಕುಗಳನು ಒದಗಿಸಿದೆ ಎಂದು ತಿಳಿಸಿದರು. ಸಂವಿಧಾನದ 73ನೇ ತಿದ್ದುಪಡಿಯ ಮೂಲಕ ಗ್ರಾಮ ಸಭೆಗಳನ್ನು ಅಸ್ತಿತ್ವಕ್ಕೆ ತಂದಿರುತ್ತದೆ. ಈ ವಿಷಯದಲ್ಲಿ ಕರ್ನಾಟಕ ರಾಜ್ಯವು ಒಂದು ಹೆಜ್ಜೆ ಮುಂದೆ ಹೋಗಿ ಗ್ರಾಮ ಸಭೆಗಳಿಗಿಂತಲೂ ತಳಮಟ್ಟದಲ್ಲಿ ವಾರ್ಡ್ ಸಭೆ, ಜನ ಸಂಪರ್ಕ ಸಭೆ ಅಸ್ತಿತ್ವಕ್ಕೆ ತಂದಿದೆ. ನಮ್ಮ ಸಂವಿಧಾನವು ಸಮಾನತೆಯ ಮೂಲತತ್ವವನ್ನು ಜನರಲ್ಲಿ ಹುಟ್ಟು ಹಾಕಿದೆ ಎಂದು ಮಾಹಿತಿ ನೀಡಿದರು.



## "ಜನಜಾಗ್ರತಿ ತಾಲೂಕ ಒಕ್ಕೂಟದ ಸಭೆ"



ಜೂನ್ 22.2024 ರಂದು ಭಾಲ್ಕಿ ತಾಲೂಕಿನ ಜನಜಾಗೃತಿ ತಾಲೂಕ ಒಕ್ಕೂಟದ ಸಭೆ ಶ್ರೀಮತಿ ಪ್ರಭಾವತಿ (ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತರು) ಆಯೋಜಿಸಿದರು. ಈ ಸಭೆಯಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಬ್ರದರ್ ರೆಜಿ ರೊನಲ್ಡ್ (ಸ್ಥಳೀಯ ಸಂಯೋಜಕರು ಭಾಲ್ಕಿ ಕೇಂದ್ರ) ಮತ್ತು ಶ್ರೀಮತಿ ನಿರ್ಮಲ (ಮಹಿಳಾ ಸಬಲೀಕರಣ ಯೋಜನೆಯ ಸಂಯೋಜಕರು) ಸಭೆಯಲ್ಲಿ ಭಾಗವಹಿಸಿದ್ದರು. ಉತ್ತಮ ಪರಿಸರ ಎಂದರೆ ನಮ್ಮ ಸುತ್ತಮುತ್ತಲಿನ ವಾತಾವರಣವನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವುದು, ನಮ್ಮ  ಸುತ್ತಲು ಗಿಡಗಳನ್ನು ಬೆಳೆಸಿಕೊಂಡು, ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸುವುದರ ಜೊತೆಗೆ ಬಟ್ಟೆ ಚೀಲವನ್ನು ಬಳಸಿ ಎಂದು ತಿಳಿಸಿದರು. ಈ ಸಭೆಯನ್ನು 25 ಜನ ಪದಾಧಿಕಾರಿಗಳು ಭಾಗವಹಿಸಿ ಪರಿಸರ ಸಂರಕ್ಷಣೆ ಕುರಿತು ತಿಳಿದುಕೊಂಡರು.



## "ಸಂವಿಧಾನಿಕ ಹಕ್ಕುಗಳ ಕುರಿತು ತರಬೇತಿ"




ಜೂನ್ 26.2024 ರಂದ ಚಿಟ್ಗುಪ್ಪ ಪಟ್ಟಣದ ಭಾಸ್ಕರ್ ನಗರದಲ್ಲಿ ಶ್ರೀಮತಿ ರೀಟ ಮಹಿಳಾ ಸಬಲೀಕರಣ ಯೋಜನೆ ಕಾರ್ಯಕರ್ತರು, ಕಮಲ ಮಹಾಸಂಗದ ಸದಸ್ಯರಿಗೆ ಸಂವಿಧಾನಿಕ ಹಕ್ಕುಗಳ ಕುರಿತು ತರಬೇತಿಯನ್ನು ಹಮ್ಮಿಕೊಂಡಿದ್ದರು. ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿರುವಂತಹ ಶ್ರೀ ಅರುಣಕೋಟಿ ನವಜೀವನ ಕಾರ್ಯಕ್ರಮದ ಆಪ್ತ ಸಮಾಲೋಚಕರು, ಭಾರತ ಸಂವಿಧಾನವು ದೇಶದಲ್ಲೇ ಅತಿ ಬೃಹತ್ ಸಂವಿಧಾನವಾಗಿದ್ದು, ಎಲ್ಲಾ ಜನಸಾಮಾನ್ಯರಿಗೆ ಮತದಾನ ಮಾಡುವುದರ ಮೂಲಕ  ಸಮಾನವಾದ ಹಕ್ಕನ್ನು ಒದಗಿಸಿ ಕೊಟ್ಟಿದೆ ಎಂಬುದರ ಕುರಿತು ಸಂಕ್ಷಿಪ್ತವಾಗಿ ತಿಳಿಸಿದರು. ಈ ತರಬೇತಿಯಲ್ಲಿ ಕಮಲಾ ಮಹಾಸಂಗದ ಮತ್ತು ಸಂಘದ 20 ಜನ ಪದಾಧಿಕಾರಿಗಳು ಭಾಗವಹಿಸಿ, ಮಹಿಳೆಯರಿಗೆ ಇರುವ ವಿಶೇಷ ಹಕ್ಕಿನ ಬಗ್ಗೆ ತಿಳಿದುಕೊಂಡರು.

## “ಸಂತ ಲಾರೆನ್ಸ್ ಚರ್ಚ್ ಆವರಣದಲಿ ಪರಿಸರ ದಿನಾಚರಣೆ”



ಚಿಟಗುಪ್ಪಾ ತಾಲೂಕಿನ ಗಾಂಧಿನಗರ ಗ್ರಾಮದ ಸಂತ ಲಾರೆನ್ಸ್ ಚರ್ಚ್ ಆವರಣದಲ್ಲಿ ದಿನಾಂಕ ಜೂನ್ 23.2024 ರಂದು ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು. ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸಹಾಯಕರಾಗಿ ಕೆಲಸ ಮಾಡುತ್ತಿರುವ ಶ್ರೀ ವಿನೋದ್, ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕಾದರೆ, ನಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ಶುದ್ಧ ಗಾಳಿ ಪಡೆಯಬೇಕಾದರೆ ಮರ ಗಿಡಗಳ ಅವಶ್ಯಕತೆ ಇದೆ, ಆದ್ದರಿಂದ ಮನೆಗೊಂದು ಗಿಡ ಹಚ್ಚಿ ಬೆಳೆಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ತಿಳಿಸಿದರು. ಸಂತ ಲಾರೆನ್ಸ್ ದೇವಾಲಯದ ನಿರ್ದೇಶಕರಾದ ಫಾದರ ಜಾರ್ಜ್ ರವರು ಹಸಿರೇ ಉಸಿರು ಮನೆಗೊಂದು ಮರ ಊರಿಗೊಂದು ವನ ಎಂಬಂತೆ ನಾವು ಪ್ರತಿಯೊಬ್ಬರೂ ಮನೆಯಲ್ಲಿ ಒಂದೊಂದು ಗಿಡ ನೆಟ್ಟು ಶುದ್ಧವಾದ ವಾತಾವರಣ ರೂಪಿಸುವುದರಲ್ಲಿ ಮುಂದಾಗಬೇಕು. ಗಿಡ ಬೆಳೆಸಿದರೆ ನಮ್ಮ ಆರೋಗ್ಯಕ್ಕೆ ರಕ್ಷಣೆ ಇದೆ ಏಕೆಂದರೆ ನಮ್ಮಲ್ಲಿರುವಂತಹ ಇಂಗಾಲದ ಡೈಯಾಕ್ಸೈಡ್ ತೆಗೆದುಕೊಂಡು ಆಮ್ಲಜನಕ ನಮಗೆ ನೀಡುತ್ತದೆ. ಆದ್ದರಿಂದ ನಾವೆಲ್ಲರೂ ಪರಿಸರವನ್ನು ಉಳಿಸೋಣ ರಕ್ಷಿಸೋಣ ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಜನಶಕ್ತಿ ತಾಲೂಕು ಒಕ್ಕೂಟದ ಅಧ್ಯಕ್ಷರಾದ ಶ್ರೀಮತಿ ಸಂಗೀತ, ಸಹ ನಿರ್ದೇಶಕರಾದ ಫಾದರ್ ಅವಿನಾಶ್, ಆರ್ಬಿಟ್ ಸಂಸ್ಥೆಯಲ್ಲಿ ಸಮಾಜ ಸೇವಕಿಯಾಗಿ ಕೆಲಸ ನಿರ್ವಹಿಸುತ್ತಿರುವ ಶ್ರೀಮತಿ ಸವಿತಾ, ಗ್ರಾಮದ ಜನರು ಮಕ್ಕಳು ಉಪಸ್ಥಿತರಿದ್ದರು. ಒಟ್ಟು 40 ಮೇಲ್ಪಟ್ಟು ಜನರು ಭಾಗವಹಿಸಿ ಪರಿಸರದ ಕುರಿತು ಮಾಹಿತಿಯನ್ನು ಪಡೆದುಕೊಂಡರು





## “ಸಂಘ ಮತ್ತು ಮಹಾಸಂಘದ ಮಹಿಳೆಯರಿಗೆ ಆರೋಗ್ಯದ ಕುರಿತು ತರಬೇತಿ”



ಜೂನ್ 20.2024 ರಂದು ಚಿಟ್ಟಗುಪ್ಪ ತಾಲೂಕಿನ ನಿರ್ಣ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತರಾದ ಶ್ರೀಮತಿ ರೀಟರವರು ಸಂಘ ಮತ್ತು ಮಹಾಸಂಗದ ಮಹಿಳೆಯರಿಗೆ ಆರೋಗ್ಯದ ಕುರಿತು ತರಬೇತಿಯನ್ನು ಹಮ್ಮಿಕೊಂಡಿದ್ದರು. ಸಂಪನ್ಮೂಲ ವ್ಯಕ್ತಿಯಾಗಿ ಶ್ರೀಮತಿ ಸವಿತಾ (ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತರು) ಆರೋಗ್ಯ ಎಂದರೆ ಎರಡು ವಿಧದಲ್ಲಿ ನೋಡಬಹುದು ಒಂದು ದೈಹಿಕ, ಇನ್ನೊಂದು ಮಾನಸಿಕ ಹಾಗಾಗಿ ನಾವು ಆರೋಗ್ಯವಂತರಾಗಿ ಇರಬೇಕಾದರೆ ದೈಹಿಕ ಹಾಗೂ ಮಾನಸಿಕ ಎರಡು ಅಂಶಗಳಲ್ಲಿ ಸದೃಢವಾಗಿರುವುದು ಅವಶ್ಯಕ. ಸದೃಢವಾದ ಆರೋಗ್ಯವನ್ನು ಕಾಪಾಡಿಕೊಳ್ಳಲು ಪೌಷ್ಟಿಕ ಆಹಾರವನ್ನು ಸೇವನೆ ಮಾಡಬೇಕು ಎಂಬುದರ ಕುರಿತು ಸವಿಸ್ತಾರವಾಗಿ ತಿಳಿಸಿದರು.ಈ ತರಬೇತಿಯಲ್ಲಿ 36 ಮಹಿಳೆಯರು ಭಾಗವಹಿಸಿ ಸದೃಢ ಆರೋಗ್ಯವಂತರಾಗಿ ಇರಬೇಕಾದರೆ, ಎಂತಹ ಆಹಾರವನ್ನು ಸೇವನೆ ಮಾಡಿಕೊಳ್ಳಬೇಕು,ಎಂಬುದರ ಬಗ್ಗೆ ತಿಳಿದುಕೊಂಡರು .

## “ಪರಿಸರ ಸ್ವಚ್ಚತಾ ಕಾರ್ಯಕ್ರಮ”



ಜೂನ್15. 2024ರಂದು ಹುಮ್ನಾಬಾದ್ ತಾಲೂಕಿನ ಸಿತಾಲ್ಗೆರ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ವತಿಯಿಂದ ಪರಿಸರ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ನಮ್ಮ ಸುತ್ತಮುತ್ತಲಿನ ವಾತಾವರಣವನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ, ಹಾಗಾಗಿ ಮನೆಯ ಸುತ್ತಮುತ್ತ ಹಾಗೂ ಸಮುದಾಯದ ಆವರಣವನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು ಎಂಬುದನ್ನು ತಿಳಿಸುವುದರ ಜೊತೆಗೆ, ಚರ್ಚ್ ಆವರಣವನ್ನು ಸ್ವಚ್ಛತೆಗೊಳಿಸಿ ಅದರ ಮಹತ್ವವನ್ನು ಮನವರಿಕೆ ಮಾಡಿಸಿದರು. ಈ ಕಾರ್ಯಕ್ರಮದಲ್ಲಿ ಹಳ್ಳಿಯ ಜನರು ಆರ್ಬಿಟ್ ಸಂಸ್ಥೆಯ ಸಿಬ್ಬಂದಿ ವರ್ಗದವರು ಭಾಗವಹಿಸಿ ರಸ್ತೆಯನ್ನು ಸ್ವಚ್ಛಗೊಳಿಸುವ ಮೂಲಕ ತಮ್ಮ ಜವಾಬ್ದಾರಿವನ್ನು ತೋರ್ಪಡಿಸಿದರು.

## “ಸರ್ಕಾರದ ಯೋಜನೆಯನ್ನು ತಿಳಿದುಕೊಂಡು ಕಿರು ಉದ್ದಿಮೆ”



ಶ್ರೀಮತಿ ಜ್ಞಾನ ದೇವಿ ಗಂಡ ಜಗನ್ನಾಥ್ ಇವರು ಚಿಟುಗುಪ್ಪ ತಾಲೂಕಿನ ವಡ್ಡನ್ಕೆರೆ ಗ್ರಾಮದ ನಿವಾಸಿಯಾಗಿದ್ದು, ಸರೋಜಿನಿ ಸಂಘದ ಅಧ್ಯಕ್ಷರಾಗಿದ್ದಾರೆ. ಇವರು ಸಂಘಕ್ಕೆ ಸೇರಿ 19 ವರ್ಷಗಳು ಕಳೆದವು, ಸಂಘ ಪ್ರಾರಂಭದಿಂದ ಹಲವಾರು ತರಬೇತಿ ಕಾರ್ಯಗಾರಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ, ಸರ್ಕಾರದಿಂದ ಸಿಗುವಂತಹ ಯೋಜನೆಗಳ ಬಗ್ಗೆ ತಿಳಿದುಕೊಂಡು, ಧೈರ್ಯ ಮತ್ತು ನಾಯಕತ್ವದ ಗುಣವನ್ನು ಹೊಂದಿದ ಇವರು ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ಚುನಾಯಿತರಾಗಿ ಐದು ವರ್ಷಗಳ ಕಾಲ ಸೇವೆ ನೀಡಿದ್ದಾರೆ. ಪ್ರಸ್ತುತವಾಗಿ ಮನೆಯ ಎಲ್ಲಾ ಜವಾಬ್ದಾರಿಗಳನ್ನು ನಿಭಾಯಿಸುವುದರ ಜೊತೆಗೆ ವ್ಯವಸಾಯದಲ್ಲಿ ತಮ್ಮನ್ನು ತೊಡಗಿಸಿಕೊಂಡು, ಒಂದು ಎಮ್ಮೆಯನ್ನು ಖರೀದಿ ಮಾಡಿದರು. ಎಮ್ಮೆ ಕರುಗಳನ್ನು ಹಾಕಿವೆ, ಸದ್ಯ ಇವರ ಹತ್ತಿರ 7 ಎಮ್ಮೆಗಳಿದು ಹೈನುಗಾರಿಕೆಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಇದರಿಂದ ಇವರಿಗೆ ಒಂದು ದಿನಕ್ಕೆ ಹದಿನೈದು ಲೀಟರ್ ಹಾಲನ್ನು ಮಾರಿ 600 ರಿಂದ 700 ರೂಪಾಯಿ ಲಾಭ ಪಡೆಯುತ್ತಿದ್ದಾರೆ. ಸದ್ಯದಲ್ಲಿ ಕುಟುಂಬದ ಪರಿಸ್ಥಿತಿ, ಮಕ್ಕಳ ಶಿಕ್ಷಣ ಉತ್ತಮ ರೀತಿಯಲ್ಲಿ ಇದೆ ಎಂದು ತಮ್ಮ ಸಂತೋಷವನ್ನು ವ್ಯಕ್ತಪಡಿಸುವುದರೊಂದಿಗೆ, ಆರ್ಬಿಟ್ ಸಂಸ್ಥೆಯ ಸಿಬ್ಬಂದಿ ವರ್ಗದವರಿಗೆ ಕೃತಜ್ಞತೆಗಳನ್ನು ಸಲ್ಲಿಸಿದ್ದಾರೆ.

## “ನಮ್ಮ ಆರೋಗ್ಯ ನಮ್ಮ ಕೈಯಲ್ಲಿ! ಉಚಿತ ಕ್ಯಾನ್ಸರ್ ತಪಾಸಣೆ ಮತ್ತು ಕಣ್ಣಿಕ ತಪಾಸಣೆ ಶಿಬಿರ”



ಹುಮ್ನಾಬಾದ್ ತಾಲೂಕಿನ ಇಂದಿರಾನಗರ (ಎಮ್.ಪಿ) ಓಣಿಯಲ್ಲಿ ದಿನಾಂಕ 25.06.2024 ರಂದು ಆರ್ಬಿಟ್ ಸಂಸ್ಥೆ ಹುಮ್ನಾಬಾದ್, ಇಂಡಿಯನ್ ಕ್ಯಾನ್ಸರ್ ಸೊಸೈಟಿ ಕಲಬುರಗಿ ಹಾಗೂ ವೆಲ್ಮೆಗ್ನಾ ಆಸ್ಪತ್ರೆ ಬೀದರ್ ಇವರ ಸಹಯೋಗದೊಂದಿಗೆ ಉಚಿತ ಕ್ಯಾನ್ಸರ್ ತಪಾಸಣೆ ಶಿಬಿರ ಹಾಗೂ ಉಚಿತ ಕಣ್ಣಿಕ ತಪಾಸಣೆ ಶಿಬಿರ ಹಮ್ಮಿಕೊಳ್ಳಲಾಯಿತು. ಇಂಡಿಯನ್ ಕ್ಯಾನ್ಸರ್ ಸೊಸೈಟಿ ಪ್ರದೇಶಿಕ ಮುಖ್ಯಸ್ಥರಾದ ಶ್ರೀ ಗುರುರಾಜ್ ಕುಲಕರ್ಣಿ ರವರು ಮಾತನಾಡಿ, ತಂಬಾಕು ಬೀಡಿ ಸಿಗರೆಟ್ ಸೇದುವುದರಿಂದ ಕ್ಯಾನ್ಸರ್ ಬರುವ ಸಾಧ್ಯತೆ ಇದೆ ಎಂದು ತಿಳಿಸಿದರು. ಕ್ಯಾನ್ಸರ್ ಬಂದರೆ ಭಯಪಡುವ ಅವಶ್ಯಕತೆ ಇಲ್ಲಾ, ಮೊದಲನೆ ಹಂತದಲ್ಲಿ ಚಿಕಿತ್ಸೆ ಪಡೆಯುವುದರ ಜೋತೆಗೆ ಗುಣಮುಖರಾಗಬಹುದು. ನಮ್ಮ ಆರೋಗ್ಯದ ಕಡೆ ಹೆಚ್ಚಿನ ಗಮನ ಹರಿಸೋಣ ಎಂದು ತೀಳಿಸಿದರು. ಬ್ರದರ್ ರೆಜಿ ರೊನಾಲ್ಡ್ ರವರು ಆರ್ಬಿಟ್ ಸಂಸ್ಥೆಯು ಜನರ ಏಳಿಗೆಗಾಗಿ ಶ್ರಮಿಸುತ್ತಿದೆ, ನಿಮ್ಮೆಲ್ಲರ ಪ್ರೊತ್ಸಾಹ ಮುಖ್ಯವಾಗಿದೆ. ಆದರಿಂದ ಈ ಶಿಬಿರದ ಪ್ರಯೊಜನವನ್ನು ಪಡೆದುಕೊಳ್ಳಿರಿ ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಮಹಿಳಾ ಸಬಲೀಕರಣ ಯೋಜನೆಯ ಸಂಯೋಜಕಿಯಾದ ಶ್ರೀಮತಿ ನಿರ್ಮಲಾ, ಕಾರ್ಯಕರ್ತರಾದ ಶ್ರೀಮತಿ ಸಬಿತಾ, ಶ್ರೀಮತಿ ಅಮೀತಾ, ಶ್ರೀಮತಿ ರೀಟಾ, ಶ್ರೀಮತಿ ಕವಿತಾ, ಶ್ರೀ ಸೂರ್ಯಕಾಂತ್ ಆರ್ಬಿಟ್ ಸಂಸ್ಥೆಯ ಸಿಬ್ಬಂದಿ ವರ್ಗದವರು ಹಾಗೂ ಓಣಿಯ ಮುಖ್ಯಸ್ಥರು ಬಾಬು ಪಡಿವಾಳ್, ಶ್ರೀ ಲಕ್ಷ್ಮಿಪುತ್ರ, ಶ್ರೀ ಪಾರ್ವತಿ, ಶ್ರೀ ಶ್ರೀಧರ್, ಪುರಸಭೆ ಸದಸ್ಯರು ಒಟ್ಟು 130 ಕೂ ಹೆಚ್ಚು ಫಲಾನುಭವಿಗಳು ಭಾಗವಹಿಸಿ ಶಿಬಿರದ ಸದುಪಯೊಗ ಪಡೆದುಕೊಂಡರು.





# “ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ”

## “ಬೆಳವಣಿಗೆಯಲ್ಲಿ ಕುಂಠಿತ ಮಕ್ಕಳ ಪೋಷಕರ ಸಭೆ”



ಜೂನ್ 14.2024 ರಂದು ಹುಮ್ನಾಬಾದ್ ತಾಲೂಕಿನ ಚೀನಕೇರಾ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕಾರ್ಯಕ್ರಮದ ಕಾರ್ಯಕರ್ತೆ ಶ್ರೀಮತಿ ಕವಿತಾ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಆಶಾ ಕಾರ್ಯಕರ್ತರೊಂದಿಗೆ ಕೈಜೋಡಿಸಿ ಮೂರು ಮಕ್ಕಳ ಮನೆ ಭೇಟಿ ಮಾಡಲಾಯಿತು. ವಾಕ್ ದೋಷವುಳ ವಿಕಲತೆ ಹೊಂದಿರುವ ಮಕ್ಕಳಿಗೆ ಚಿಕ್ಕ- ಚಿಕ್ಕ ಶಬ್ದಗಳಿಂದ ಅಮ್ಮ, ಅಪ್ಪ, ಅನ್ನೋ ಶಬ್ದದಿಂದ ಚಟುವಟಿಕೆ ಮಾಡಿಸುವುದನ್ನು ಮಕ್ಕಳ ಪೋಷಕರಿಗೆ ಹೇಳಿಕೊಡಲಾಯಿತು. ವಿಕಲತೆ ಹೊಂದಿರುವ ಮಕ್ಕಳ ಪೋಷಕರು ಹಾಗೂ ಸಾಮಾನ್ಯ ಮಕ್ಕಳ ಪೋಷಕರನ್ನು ಜೊತೆಗೂಡಿಸಿ ಸಭೆ ನಡೆಸಲಾಯಿತು. ಸಭೆಯಲ್ಲಿ ರಕ್ತ ಸಂಬಂಧದಲ್ಲಿ ವಿವಾಹ ಮಾಡಿದರೆ 100 ಕ್ಕೆ 70 ಪ್ರತಿಶತ ಈ ರೀತಿ ಮಕ್ಕಳು ಹುಟ್ಟುವ ಸಂಭವವಿರುತ್ತದೆ, ಆದ್ದರಿಂದ ಸಮೀಪದ ರಕ್ತ ಸಂಬಂಧ ವಿವಾಹಗಳು ತಪ್ಪಿಸಬೇಕು. ಸಂಸ್ಥೆಯಿಂದ ಮಕ್ಕಳಿಗೆ ಉಪಯೋಗವಾಗುವಂತಹ ಸಾಧನೆ ಸಲಕರಣೆಗಳು, ಸ್ಟ್ಯಾಂಡಿಂಗ್ ಫ್ರೇಮ್, ವೀಲ್ ಚೇರ್,ವಾಕರ್ ಕೊಟ್ಟು ಚಟುವಟಿಕೆ ಮಾಡಿಸುತ್ತಾ, ಮಕ್ಕಳಲ್ಲಿ ಬದಲಾವಣೆ ತರಲು ಪ್ರಯತ್ನಿಸಲಾಗುತ್ತಿದೆ. ಪೋಷಕರು ಕಾರ್ಯಕರ್ತರಿಗೆ ಸಹಕಾರ ನೀಡಬೇಕೆಂದು ಈ ಸಂದರ್ಭದಲ್ಲಿ ಕೋರಲಾಯಿತು. ಅಂಗನವಾಡಿ ಕೇಂದ್ರಕ್ಕೆ ಮಕ್ಕಳನ್ನು ಕಳುಹಿಸಬೇಕು. ಕಾರ್ಯಕರ್ತರು ಕೇಂದ್ರಗಳಲ್ಲಿ ಚಟುವಟಿಕೆ ಮಾಡಿಸಲಿದ್ದೇವೆ ಎಂದು ಪೋಷಕರಿಗೆ ತಿಳಿಸಲಾಯಿತು. ಮಕ್ಕಳಿಗೆ ಪೌಷ್ಟಿಕ ಆಹಾರದ ಕೊರತೆ ಇರುವುದರಿಂದ ಸಂಸ್ಥೆಯಿಂದ ಪೌಷ್ಟಿಕ ಆಹಾರ ವಿತರಣೆ ಮಾಡಲಾಗುತ್ತಿದೆ. ಸಾಕಷ್ಟು ಮಕ್ಕಳಿಗೆ ಸರಕಾರದಿಂದ ಹಣ ಬರುವ ಹಾಗೆ ಯ.ಡಿ.ಐ.ಡಿ ಕಾರ್ಡ್, ಆಧಾರ್ ಕಾರ್ಡ್ ಮಾಡಿಸಲಾಗಿದೆ ಎಂದು ಹೇಳುತ್ತಾ ಕಾರ್ಯಕ್ರಮ ಮುಕ್ತಾಯಗೊಳಿಸಲಾಯಿತು. ಈ ಕಾರ್ಯಕ್ರಮದಲ್ಲಿ ಎಂಟು ಜನ ಭಾಗವಹಿಸಿ ಮಾಹಿತಿ ಪಡೆದು ಕೂಡಿಕೊಂಡರು.



## “ಪೌಷ್ಟಿಕ ಆಹಾರದಿಂದ ಮಕ್ಕಳ ಬೆಳವಣಿಗೆ”

ಜೂನ್ 14. 2024 ಹುಮ್ನಾಬಾದ್ ತಾಲೂಕಿನ ಹಳ್ಳಿಕೇಡ್ ಬಿ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕಾರ್ಯಕರ್ತೆಯಾದ ಶ್ರೀಮತಿ ಮಮತಾರವರು. ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳನ್ನು ಅಸೆಸ್ಮೆಂಟ್ ಹಾಗೂ ಚಟುವಟಿಕೆ ಮಾಡಿಸುವುದರ ಜೊತೆಗೆ ಪೌಷ್ಟಿಕ ಆಹಾರ ನೀಡಿವ ಮುಖಾಂತರ, ಮಗುವಿನಲ್ಲಿ ಬದಲಾವಣೆ ತರುವ ನಿಟ್ಟಿನಲ್ಲಿ ಸಂಸ್ಥೆಯ ಕಾರ್ಯಕರ್ತೆಯರು ಉದ್ದೇಶಗಳನ್ನು ಈಡೇರಿಸುವಲ್ಲಿ ನಿರತರಾಗಿದ್ದಾರೆ ಸಂಸ್ಥೆಯ ಈ ಒಂದು ಸಹಾಯ ಹಾಗೂ ಪ್ರಯತ್ನದಿಂದಾಗಿ. ಬೆಳವಣಿಗೆಯಲ್ಲಿ ಕುಂಟಿತ ಹೊಂದಿರುವ ಮಕ್ಕಳ ಸುಧಾರಣೆಯನ್ನು ಕಂಡು ಪೋಷಕರು ಆರ್ಬಿಟ್ ಸಂಸ್ಥೆಗೆ ಧನ್ಯವಾದಗಳು ತಿಳಿಸಿದ್ದಾರೆ.



## “31 ಮೇ ವಿಶ್ವ ತಂಬಾಕು ರಹಿತ ದಿನ”

ಜೂನ್ 12.2024 ರಂದು ಹುಮ್ನಾಬಾದ್ ತಾಲೂಕಿನ ಕುಮಾರ್ ಚಿಂಚೋಳಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 31 ಮೇ ‘ವಿಶ್ವ ತಂಬಾಕು ರಹಿತ ದಿನದ’ ಅಂಗವಾಗಿ ಜಾಗ್ರತಿ ಕಾರ್ಯಕ್ರಮವನ್ನು ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕಾರ್ಯಕರ್ತರಾದ ಶ್ರೀ ಸೂರ್ಯಕಾಂತ್ ಹಮ್ಮಿಕೊಂಡಿದ್ದರು. ಈ ಜಾಗೃತಿ ಕಾರ್ಯಕ್ರಮದಲ್ಲಿ 80 ಮಕ್ಕಳು ಹಾಗೂ ಶಾಲಾ ಸಿಬ್ಬಂದಿ ವರ್ಗದವರು ಭಾಗವಹಿಸಿದರು. 2024 ರ ಘೋಷವಾಕ್ಯ, : " ತಂಬಾಕು ಉದ್ಯಮದ ಹಸ್ತಕ್ಷೇಪದಿಂದ ಮಕ್ಕಳನ್ನು ರಕ್ಷಿಸುವುದು" ತಂಬಾಕು ಉತ್ಪನ್ನಗಳ ಬಳಕೆಯು ನಮ್ಮ ದೇಹದ ಪ್ರತಿಯೊಂದು ಜೀವಕೋಶದ ಮೇಲೆ ಮಾರಕ ಪರಿಣಾಮವನ್ನು ಬೀರುತ್ತದೆ. ಧೂಮಪಾನಿಗಳು ತಮ್ಮ ಆರೋಗ್ಯದ ಜೊತೆಗೆ ಇತರರ ಆರೋಗ್ಯವನ್ನು ಹಾಳು ಮಾಡುತ್ತಾರೆ. ಒಬ್ಬ ವ್ಯಕ್ತಿ ಕ್ಯಾನ್ಸರ್ ಇಂದ ಮರಣ ಹೊಂದಿದರೆ ಇಡೀ ಕುಟುಂಬವು ಅದರ ಘೋರ ಪರಿಣಾಮ ಎದುರಿಸಬೇಕಾಗುತ್ತದೆ. ತಂಬಾಕು ಮತ್ತು ಅದರ ಉತ್ಪನ್ನಗಳ ಸೇವನೆಯಿಂದ ದೂರವಿರಿ, ಆರೋಗ್ಯಯುಕ್ತ ನೆಮ್ಮದಿಯ ಜೀವನ ಮುನ್ನಡೆಸಿ. ತಂಬಾಕು ಮುಕ್ತ ಸಮಾಜ ನಿರ್ಮಾಣಕ್ಕೆ ಪರಸ್ಪರ ಕೈಜೋಡಿಸೋಣ ಎಂದು ಮಾಹಿತಿ ನೀಡಲಾಯಿತು.





## “ನವಜೀವನ (ಎಲ್.ಎಲ್.ಎಲ್.ಎಫ್) ಕಾರ್ಯಕ್ರಮ”

### “ಮಾನಸಿಕ ಆರೋಗ್ಯದ ಕುರಿತು ಜಾಗ್ರತಿ ಕಾರ್ಯಕ್ರಮ”



ಜೂನ್ 7.2024 ರಂದು ಬಸವಕಲ್ಯಾಣ ತಾಲೂಕಿನ ಎರಂಡಗಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಘಾಟ್ ಹಿಪ್ಪರಗ ಗ್ರಾಮದ ನರೇಗಾ ಯೋಜನೆ ಅಡಿಯಲ್ಲಿ ಕೆಲಸ ಮಾಡುತ್ತಿದ್ದ ಕೂಲಿ ಕಾರ್ಮಿಕರಿಗೆ, ಆರ್ಬಿಟ್ ಸಂಸ್ಥೆಯ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಸಂಯುಕ್ತ ಆಶ್ರಮದಲ್ಲಿ ಮಾನಸಿಕ ಆರೋಗ್ಯದ ಕುರಿತು ಜಾಗ್ರತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಈ ಕಾರ್ಯಕ್ರಮದಲ್ಲಿ, ಸಂಪನ್ಮೂಲ ವ್ಯಕ್ತಿಯಾಗಿ ಶ್ರೀಮತಿ ಸುಜಾತ ಮಾತನಾಡಿ, ಮಾನಸಿಕ ಆರೋಗ್ಯ, ಮಾನಸಿಕ ಕಾಯಿಲೆಯ ಲಕ್ಷಣಗಳು, ಮಾನಸಿಕ ಕಾಯಿಲೆಗೆ ಇರುವ ಕಾರಣಗಳು ಮತ್ತು ಮಾನಸಿಕ ಕಾಯಿಲೆಗೆ ಇರುವ ಸೂಕ್ತ ಚಿಕಿತ್ಸೆಯ ಕುರಿತು ವಿವರವಾಗಿ ತಿಳಿ ಹೇಳಿದರು, ನಿಮ್ಮ ಅಕ್ಕಪಕ್ಕದಲ್ಲಿ ಯಾರಾದರೂ ಮಾನಸಿಕ ಕಾಯಿಲೆಯಿಂದ ಬಳಲುತ್ತಿರುವ ವ್ಯಕ್ತಿಗಳು ಕಂಡು ಬಂದರೆ, ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಿಗೆ ಸಂಪರ್ಕಿಸುವ ಮೂಲಕ ಸೂಕ್ತ ಮಾರ್ಗದರ್ಶನ ಪಡೆಯುವಂತೆ ಸಲಹೆ ನೀಡಿದರು. ಆರ್ಬಿಟ್ ಸಂಸ್ಥೆಯ ಮಾನಸಿಕ ಅಸ್ವಸ್ಥರ ಸಹಾಯವಾಣಿಗೆ ಕರೆ ಮಾಡುವ ಮೂಲಕ ಮಾನಸಿಕ ಕಾಯಿಲೆಯ ಕುರಿತು ಸ್ಪಷ್ಟ ಮಾಹಿತಿ ಪಡೆದುಕೊಳ್ಳಬಹುದು ಎಂದರು. ಈ ಕಾರ್ಯಕ್ರಮದಲ್ಲಿ 30 ಜನ ನರೇಗಾ ಕೂಲಿ ಕಾರ್ಮಿಕರು ಭಾಗವಹಿಸಿ ಇದರ ಸದುಪಯೋಗವನ್ನು ಪಡೆದುಕೊಂಡರು.

### “ಶಾಲಾ ಮಕ್ಕಳಿಗೆ ಮಾನಸಿಕ ಅಸ್ವಸ್ಥರ ಕುರಿತು ಜಾಗ್ರತಿ ಕಾರ್ಯಕ್ರಮ”



ಬಸವಕಲ್ಯಾಣ ತಾಲೂಕಿನ ಮುಡಬಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ಮಕ್ಕಳಿಗೆ, ಆರ್ಬಿಟ್ ಸಂಸ್ಥೆಯ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಆರೋಗ್ಯದ ಕುರಿತು ಜಾಗೃತಿಕ ಕಾರ್ಯಕ್ರಮವನ್ನು ಆಯೋಜಿಸಲಾಗಿತು. ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀಮತಿ ಸುಜಾತ ಮಾತನಾಡಿ, ಮಾನಸಿಕ ಆರೋಗ್ಯ, ಮಾನಸಿಕ ಕಾಯಿಲೆ ಲಕ್ಷಣಗಳು, ಮಾನಸಿಕ ಕಾಯಿಲೆಗೆ ಇರುವ ಕಾರಣಗಳು, ಮಾನಸಿಕ ಕಾಯಿಲೆಯ ಬಗ್ಗೆ ಜನರಲ್ಲಿರುವ ತಪ್ಪು ಕಲ್ಪನೆಗಳು ಹಾಗೂ ಮಾನಸಿಕ ಕಾಯಿಲೆಗೆ ಇರುವ ಸೂಕ್ತ ಚಿಕಿತ್ಸೆಯ ಕುರಿತು ಸವಿವರವಾದ ಮಾಹಿತಿಯನ್ನು ನೀಡಿದರು. ನಿಮ್ಮ ಅಕ್ಕ ಪಕ್ಕ ದಲ್ಲಿ ಮಾನಸಿಕ ಕಾಯಿಲೆಯಿಂದ ಬಳಲುತ್ತಿರುವ ರೋಗಿಗಳು ಕಂಡು ಬಂದಲ್ಲಿ ನಮ್ಮ ಸಹಾಯವಾಣಿಗೆ ಕರೆ ಮಾಡುವ ಮೂಲಕ ಸಮಾಜದಲ್ಲಿ ಅವರು ನಮ್ಮಂತೆ ಸಹಜ ಜೀವನವನ್ನು ನಡೆಸಲು ಸಹಾಯ ಮಾಡಲು ಬರುವಂತೆ ಮನವಿ ಮಾಡಿದರು. ಮಾನಸಿಕ ಅಸ್ವಸ್ಥರನ್ನು ಪ್ರಥಮ ಹಂತದಲ್ಲಿ ಪತ್ತೆ ಹಚ್ಚಿ ಅವರನ್ನು ಜಿಲ್ಲಾ ಮಾನಸಿಕ ಆರೋಗ್ಯ ಶಿಬಿರದಲ್ಲಿ ತಪಾಸ ಣೆ ಮಾಡುವ ಮೂಲಕ, ಸೂಕ್ತ ಹಾಗೂ ಉಚಿತ ಚಿಕಿತ್ಸೆಯನ್ನು ಕೊಡಿಸುವ ಮೂಲಕ ಸಮಾಜದ ಮುಖ್ಯ ವಾಹಿನಿಗೆ ತಂದು ಸಮುದಾಯ ಆಧಾರಿತ ಪುನರ್ವಸತಿ ಕಲ್ಪಿಸುವುದೇ ಆರ್ಬಿಟ್ ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ. ಈ ಕಾರ್ಯಕ್ರಮದಲ್ಲಿ ಮೂಡಬಿ ಸರಕಾರಿ ಪ್ರೌಢಶಾಲೆಯ ಮಕ್ಕಳು ಮತ್ತು ಶಿಕ್ಷಕರು ಹಾಗೂ ಮೂಡುಬಿ ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿಗಳು ಸೇರಿ 162 ಜನರು ಭಾಗವಹಿಸಿ ಇದರ ಸದುಪಯೋಗ ಪಡೆದುಕೊಂಡರು.



ಜೂನ್13.2024 ರಂದು ಗೋರ್ಟ್ ಬಿ ಗ್ರಾಮದ, ಶ್ರೀ ಗುರುಪಾದ ಶಿವಾಚಾರ್ಯ ಪ್ರೌಢ್ ಶಾಲೆಯಲ್ಲಿ ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ಮತ್ತು ನವ ಜೀವನ ಎಲ್.ಎಲ್.ಎಲ್.ಎಫ್ ಫೌಂಡೇಶನ್ ಅವರ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಅಸ್ವಸ್ಥತೆ ಕುರಿತು ಜಾಗೃತಿ ಕಾರ್ಯಕ್ರಮ ನಡೆಸಲಾಯಿತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ನವ ಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಅಮರ್ ಭಾಗವಹಿಸಿದ್ದರು. ಮಾನಸಿಕ ಆರೋಗ್ಯ, ಮಾನಸಿಕ ಕಾಯಿಲೆ, ಮಾನಸಿಕ ಕಾಯಿಲೆ ಲಕ್ಷಣಗಳು ಹಾಗೂ ಮಾನಸಿಕ ಕಾಯಿಲೆಗೆ ಇರುವ ಸೂಕ್ತ ಚಿಕಿತ್ಸೆಯ ಕುರಿತು ಮಾಹಿತಿ ನೀಡಿದರು. ಮಾನಸಿಕ ಕಾಯಿಲೆ ಉಳ್ಳವರು ಮೂಢನಂಬಿಕೆಗೆ ಬಲಿಯಾಗದೆ ಸೂಕ್ತ ಚಿಕಿತ್ಸೆಯನ್ನು ಪಡೆಯಲು ಮುಂದಾಗಬೇಕೆಂದು ಕರೆ ನೀಡಿದರು. ಈ ಜಾಗೃತಿ ಕಾರ್ಯಕ್ರಮದಲ್ಲಿ ಒಟ್ಟು 61 ಜನ ಶಾಲಾ ಮಕ್ಕಳು ಭಾಗವಹಿಸಿ ಮಾಹಿತಿ ಪಡೆದುಕೊಂಡರು.

## “ವಿಶ್ವ ಪರಿಸರ ದಿನ ಮತ್ತು ಮಾನಸಿಕ ಆರೋಗ್ಯ ಕುರಿತು ಮಾಹಿತಿ”



ಜೂನ್ 5.2024 ರಂದು, ಬಸವಕಲ್ಯಾಣ ತಾಲೂಕಿನ, ಯರಬಾಗ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ, ವಿಶ್ವ ಪರಿಸರ ದಿನ ಮತ್ತು ಮಾನಸಿಕ ಆರೋಗ್ಯ ಕುರಿತು ಆರ್ಬಿಟ್ ಸಂಸ್ಥೆಯ ನವ ಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಸಂಯುಕ್ತಾಶ್ರಯರದಲ್ಲಿ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ವಿಜಯಕುಮಾರ ಮಾತನಾಡಿ, ಪರಿಸರ ಉಳಿಸಲು ಪ್ರತಿಯೊಬ್ಬರು ಸಂಕಲ್ಪ ತೊಟ್ಟು ಮನೆಗೊಂದು ಸಸಿ ನೆಡುವ ಮೂಲಕ ಪರಿಸರ ಸಂರಕ್ಷಣೆ ಮಾಡಬೇಕು, ಮುಂಬರುವ ದಿನಗಳಲ್ಲಿ ಉಸಿರಾಡಲು ಅಮ್ಲಜನಕ ಇಲ್ಲವಾದಲ್ಲಿ ಬದುಕುವುದು ತುಂಬಾ ಕಷ್ಟ. ಹಾಗು ಮಾನಸಿಕ ಅಸ್ವಸ್ಥರ ಲಕ್ಷಣಗಳು ಮತ್ತು ಖಾಯಿಲೆಗೆ ಕಾರಣಗಳು ತಿಳಿಸಿ, ನಿಮ್ಮ ಹಳ್ಳಿಯಲ್ಲಿ ಇಂತಹ ವ್ಯಕ್ತಿಗಳು ಕಂಡುಬಂದಲ್ಲಿ, ತಾಲೂಕಾ ಆರೋಗ್ಯ ಕೇಂದ್ರದಲ್ಲಿ ತಜ್ಞ ಮನೋವೈದ್ಯರಿಂದ ಉಚಿತ ತಪಾಸಣೆ ಮತ್ತು ಚಿಕಿತ್ಸೆಯನ್ನು ಪಡೆದು ಕೊಳಬಹುದು ಎಂದು ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 54 ಜನರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

## “ಆಶಾ ಕಾರ್ಯಕರ್ತರಿಗೆ ಮಾನಸಿಕ ಅಸ್ವಸ್ಥರ ಕುರಿತು ತರಬೇತಿ”



ಜೂನ್ 3.2024 ರಂದು ಕಮಾಲನಗರ ತಾಲೂಕಿನ ಮುಧೋಳ್ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ . ಆರ್ಬಿಟ್ ಸಂಸ್ಥೆಯ ನವಜೀವನ ಎಲ್.ಎಲ್.ಎಲ್.ಎಫ್ ಸಂಯುಕ್ತ ಆಶ್ರಯದಲ್ಲಿ. ಆಶಾ ಕಾರ್ಯಕರ್ತರಿಗೆ ಮಾನಸಿಕ ಅಸ್ವಸ್ಥರ ಕುರಿತು ತರಬೇತಿ ನೀಡಲಾಯಿತು. ಈ ತರಬೇತಿಗೆ ಸಂಪನ್ಮೂಲ ವ್ಯಕ್ತಿಯಾಗಿ ಅರ್ಬಿಟ್ ಸಂಸ್ಥೆಯ ನವ ಜೀವನ ಕಾರ್ಯಕ್ರಮದ ಸಂಯೋಜಕರು ಮಹಮ್ಮದ್ ರಫಿಕ್ ರವರ ಭಾಗವಹಿಸಿದರು. ಕಳೆದ ನಾಲ್ಕು ವರ್ಷಗಳಿಂದ ಆರ್ಬಿಟ್ ಸಂಸ್ಥೆಯು ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದ ಸಂಯೋಜನೆಯೊಂದಿಗೆ 150 ಕ್ಕಿಂತ ಹೆಚ್ಚು ಮಾನಸಿಕ ಅಸ್ವಸ್ಥರ ಹಾಗೂ ಪೋಷಕರ ಜೊತೆಯಲ್ಲಿ ಕೆಲಸ ಮಾಡುತ್ತಿದೆ. ಮಾನಸಿಕ ಅಸ್ವಸ್ಥರನ್ನು ಗುರುತಿಸಿ ಮುಖ್ಯ ವಾಹಿನಿಗೆ ತರಲು ಶ್ರಮ ಪಡುತ್ತಿದೆ. ಆರ್ಬಿಟ್ ಸಂಸ್ಥೆಯು ಲಿವ್ ಲವ್ ಲಾಫ್ ಫೌಂಡೇಶನ್ ಜೊತೆ ಸೇರಿ ಬಸವಕಲ್ಯಾಣ, ಭಾಲ್ಕಿ, ಔರಾದ್, ಬೀದರ್, ಹೂಲಸೂರ ತಾಲೂಕಿನಲ್ಲಿ ಮಾನಸಿಕ ಅಸ್ವಸ್ಥರ ಪತ್ತೆ ಹಚ್ಚುವಿಕೆ ಹಾಗೂ ಪುನರ್ವಸತಿ ಕಾರ್ಯಕ್ರಮವನ್ನು ನಡೆಸುತ್ತಿದೆ. ಮಾನಸಿಕ ಕಾಯಿಲೆ, ಮಾನಸಿಕ ಖಾಯಿಲೆಯ ಬಗ್ಗೆ ಇರುವ ತಪ್ಪು ಕಲ್ಪನೆಗಳು, ಮಾನಸಿಕ ಕಾಯಿಲೆಯ ಲಕ್ಷಣಗಳು ಹಾಗೂ ಮಾನಸಿಕ ಕಾಯಿಲೆಗೆ ಇರುವ ಸೂಕ್ತ ಚಿಕಿತ್ಸೆಯ ಕುರಿತು ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ ಆರೋಗ್ಯ ಇಲಾಖೆಯ ಸಿಬ್ಬಂದಿ ಹಾಗೂ ಒಟ್ಟು 30 ಆಶಾ ಕಾರ್ಯಕರ್ತರು ಭಾಗವಹಿಸಿ ಮಾಹಿತಿ ಪಡೆದುಕೊಂಡರು.

## “ಮಾನಸಿಕ ಕಾಯಿಲೆ, ಕ್ಯಾನ್ಸರ್ ಮತ್ತು ಪರಿಸರ ಕುರಿತು ಅರಿವು”



ಜೂನ್ 19.2024 ರಂದು ನಾಗೂರ್ ಕೆ ಗ್ರಾಮದ ಗ್ರಾಮಸ್ಥರಿಗೆ ಮಾನಸಿಕ ಕಾಯಿಲೆ, ಕ್ಯಾನ್ಸರ್ ಮತ್ತು ಪರಿಸರ ಕುರಿತು ಅರಿವು ಮೂಡಿಸಲಾಯಿತು. ಈ ಜಾಗೃತಿ ಕಾರ್ಯದಲ್ಲಿ ಧನುರಾ (ಎಚ್) ಪೊಲೀಸ್ ಠಾಣೆಯ ಸಹಾಯಕ ಪೊಲೀಸ್ ಇನ್ಸ್ಪೆಕ್ಟರ್ ವಿಠಲ್ ರಾವ್ ಮಾತನಾಡಿದರು. ಆರೋಗ್ಯಕರ ಜೀವನ ನಡೆಸಲು ಪರಿಸರ ಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿಯಾಗಿದೆ, ನಮ್ಮ ಮನೆಯ ಸುತ್ತ ಮುತ್ತಲಿನ ಪರಿಸರವನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವುದು, ಚರಂಡಿಗಳನ್ನು ಸ್ವಚ್ಛವಾಗಿಟುಕೊಳ್ಳುವುದು, ಗಿಡ ಮರಗಳನ್ನು ಬೆಳೆಸುವುದು, ಅತಿ ಮುಖ್ಯವಾಗಿದೆ ಎಂದು ತಿಳಿಸಿದರು. ಅದೇ ರೀತಿ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಕಾರ್ಯಕರ್ತರಾದ ಲೋಹೇಶ ಮಾತನಾಡುತ್ತಾ, ಆರೋಗ್ಯದಲ್ಲಿ ಮಾನಸಿ ಆರೋಗ್ಯವ ಅತಿ ಮುಖ್ಯವಾಗಿದೆ. ಮಾನಸಿಕ ರೋಗವು ಮೆದುಳಿನ ರೋಗವಾಗಿದ್ದು ಸೂಕ್ತ ಚಿಕಿತ್ಸೆ ಮುಖಾಂತರ ಈ ರೋಗವನ್ನು ಗುಣಪಡಿಸಬಹುದು ಎಂದು ಮಾಹಿತಿ ನೀಡಿದರು.

## "ಮಾನಸಿಕ ಆರೋಗ್ಯದ ಕುರಿತು ಜಾಗೃತಿ"



ಜೂನ್ 07.2024 ರಂದು ಬೀದರ್ ತಾಲೂಕಿನ ಮಮದಾಪುರ ಗ್ರಾಮದ ಜನರಿಗೆ ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಎಲ್.ಎಲ್.ಎಲ್.ಎಫ್ ಸಹಯೋಗದಲ್ಲಿ ಸಂಸ್ಥೆಯ ಕಾರ್ಯಕರ್ತರಾದ ಆನಂದ್ ರವರು ಮಾನಸಿಕ ಆರೋಗ್ಯದ ಕುರಿತು ಜಾಗೃತಿ ಮೂಡಿಸಿದರು. ಶಾರೀರಿಕವಾಗಿ, ಮಾನಸಿಕವಾಗಿ ಮತ್ತು ಸಾಮಾಜಿಕವಾಗಿ ಚೆನ್ನಾಗಿರುವುದೇ ಪರಿಪೂರ್ಣ ಆರೋಗ್ಯ. ಮಾನಸಿಕ ಕಾಯಿಲೆಯೂ ಮೆದುಳಿನಲ್ಲಿ ಆಗುವ ರಾಸಾಯನಿಕ ಕ್ರಿಯೆಗಳಲ್ಲಿ ಏರುಪೇರಿನ ಬದಲಾವಣೆಯಾಗಿದೆ. ಮಾನಸಿಕ ಕಾಯಿಲೆಯಿಂದ ನರಳುತ್ತಿರುವ ವ್ಯಕ್ತಿಯಲ್ಲಿ ಆಲೋಚನೆ ಮತ್ತು ಭಾವನೆಗಳಲ್ಲಿ ಏರುಪೇರಾಗುತ್ತವೆ. ಮೂಢನಂಬಿಕೆಗೆ ಬಲಿಯಾಗಾದೆ ಮಾನಸಿಕ ಕಾಯಿಲೆಗೆ ಮನೋವೈದ್ಯರ ಬಳಿ ಸೂಕ್ತ ಚಿಕಿತ್ಸೆ ಪಡೆದುಕೊಳ್ಳಲು ಸಲಹೆ ನೀಡಿದರು. ಈ ಜಾಗೃತಿ ಕಾರ್ಯಕ್ರಮದಲ್ಲಿ 10 ಫಲಾನುಭವಿಗಳು ಭಾಗವಹಿಸಿ ಮಾಹಿತಿ ಪಡೆದುಕೊಂಡರು.

## "ಮಾನಸಿಕ ಅಸ್ವಸ್ಥತೆ ಮತ್ತು ಕ್ಯಾನ್ಸರ್ ಕುರಿತು ಅರಿವು"



ಜೂನ್ 13.2024 ರಂದು ಭಾಲ್ಕಿ ತಾಲೂಕಿನ ತುಗಾಂವ ಗ್ರಾಮದ ನರೇಗಾ ಕೂಲಿ ಕಾರ್ಮಿಕರಿಗೆ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಕುಮಾರ್ ಮಾನಸಿಕ ಅಸ್ವಸ್ಥತೆ ಮತ್ತು ಕ್ಯಾನ್ಸರ್ ಕುರಿತು ಅರಿವು ಮೂಡಿಸಿದರು. ಮಾನಸಿಕ ರೋಗ, ಮಾನಸಿಕ ರೋಗಕ್ಕೆ ಕಾರಣ, ಮಾನಸಿಕ ಕಾಯಿಲೆ ಲಕ್ಷಣಗಳು ಮತ್ತು ಚಿಕಿತ್ಸೆ ಬಗ್ಗೆ ಅರಿವು ಮೂಡಿಸಲಾಯಿತು. ಹಾಗೂ ಕ್ಯಾನ್ಸರ್ ಕಾಯಿಲೆಯು ಹೇಗೆ ಬರುತ್ತದೆ? ಮತ್ತು ಅದನ್ನು ಪತ್ತೆ ಹಚ್ಚುವ ನಿಧಾನವನ್ನು ತಿಳಿಸಲಾಯಿತು. ಪೂರ್ವದಲ್ಲಿ ಕ್ಯಾನ್ಸರ್ ತಪಾಸಣೆ ಮಾಡಿಸಿಕೊಳ್ಳುವ ಮುಖಾಂತರ ಸಮರ್ಥವಾಗಿ ಎದುರಿಸಿ ಸೂಕ್ತ ಚಿಕಿತ್ಸೆ ಪಡೆಯಬಹುದು ಎಂದು ಮಾಹಿತಿ ನೀಡಿದರು. ಈ ಜಾಗೃತಿ ಕಾರ್ಯಕ್ರಮದಲ್ಲಿ 26 ಜನ ಭಾಗವಹಿಸಿ ಮಾನಸಿಕ ಕಾಯಿಲೆ ಹಾಗೂ ಕ್ಯಾನ್ಸರ್ ಕುರಿತು ಮಾಹಿತಿ ಪಡೆದುಕೊಂಡರು.

## "ಮಾನಸಿಕ ಅಸ್ವಸ್ಥರ ಕುರಿತು ಅರಿವು"



ಜೂನ್ 13.2024 ರಂದು ಮೂರಾಳ ಗ್ರಾಮದ ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ ಕೆಲಸ ಮಾಡುತ್ತಿರುವ ಕೂಲಿ ಕಾರ್ಮಿಕರಿಗೆ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಕಾರ್ಯಕರ್ತರಾದ ಲೋಹೇಶ ರವರಿಂದ ಮಾನಸಿಕ ಅಸ್ವಸ್ಥರ ಕುರಿತು ಅರಿವು ಮೂಡಿಸಲಾಯಿತು. ಮಾನಸಿಕ ರೋಗವು ಇದೊಂದು ಮೆದುಳಿನ ರೋಗವಾಗಿದ್ದು, ಈ ರೋಗವು ಯಾರಿಗೆ ಬೇಕಾದರೂ ಬರಬಹುದು. ಮಾನಸಿಕ ರೋಗದ ಲಕ್ಷಣಗಳು ಏಕಾಂತವಾಗಿರುವುದು, ವಿನಾ:ಕಾರಣ ನಗುವುದು, ವಿನಾ:ಕಾರಣ ಅಳುವುದು, ವಿನಾ:ಕಾರಣ ಸಂಶಯ ಪಡುವುದು, ಕಿವಿಯಲ್ಲಿ ಒಂದು ರೀತಿಯ ಶಬ್ದ ಬರುವುದು, ತನ್ನಲ್ಲಿ ತಾನೇ ಮಾತಾಡುವುದು, ಇತ್ಯಾದಿ. ಈ ಮೇಲಿನ ಲಕ್ಷಣಗಳನ್ನು ಕಂಡು ಬಂದಲ್ಲಿ ಅಂಥ ವ್ಯಕ್ತಿಯು ಮಾನಸಿಕ ರೋಗಕ್ಕೆ ತುತ್ತಾಗಿರುತ್ತಾನೆ ಎಂದು ತಿಳಿಸಲಾಯಿತು. ಇಂಥ ವ್ಯಕ್ತಿಗಳು ಕಂಡು ಬಂದಲ್ಲಿ ಸಮೀಪದ ತಾಲೂಕ ಆಸ್ಪತ್ರೆಯಲ್ಲಿ ತಿಂಗಳ ಎರಡನೇ ಮಂಗಳವಾರ ಉಚಿತ ಚಿಕಿತ್ಸೆ ನೀಡಲಾಗುತ್ತದೆ ಎಂದು ಮಾಹಿತಿ ನೀಡಲಾಯಿತು. ಈ ಅರಿವಿನ ಕಾರ್ಯಕ್ರಮದಲ್ಲಿ 22 ಜನ ಭಾಗವಹಿಸಿ ಮಾನಸಿಕ ಕಾಯಿಲೆಯ ಕುರಿತು ಮಾಹಿತಿ ಪಡೆದುಕೊಂಡರು.

## "ವಿಶ್ವ ಪರಿಸರ ದಿನದ ವಿಷಯವಾದ 'ಭೂ ಮರು ಸ್ಥಾಪನೆ"



ಜೂನ್ 5.2024 ರಂದು ಭಾಲ್ಕಿ ತಾಲೂಕಿನ ಭಾತಂಭ್ರಾ ಗ್ರಾಮದ ಸರಕಾರಿ ಕನ್ನಡ ಮಾಧ್ಯಮಿಕ ಶಾಲೆಯ ಸಿಬ್ಬಂದಿ ವರ್ಗ ಮತ್ತು ಮಕ್ಕಳೊಂದಿಗೆ '2024'ರ ವಿಶ್ವ ಪರಿಸರ ದಿನದ ವಿಷಯವಾದ 'ಭೂ ಮರು ಸ್ಥಾಪನೆ, ಮರುಭೂಮಿ ಮತ್ತು ಬರ ಸ್ಥಿತಿ ಸ್ಥಾಪಕತ್ವ' ಘೋಷವಾಕ್ಯ ಹೇಳುವ ಮುಲಕ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು. ಪರಿಸರದ ಮಹತ್ವ, ಪರಿಸರವನ್ನು ಉಳಿಸಿ ಬೆಳೆಸುವ ಕುರಿತು ಹಾಗೂ ಪ್ಲಾಸ್ಟಿಕ್ ಬಳಕೆಯ ನಿಷೇಧ, ನೀರಿನ ಸದ್ಬಳಕೆ, ಪ್ರತಿಯೊಬ್ಬರು ಮನೆಗೊಂದು ಮರ ನೆಡುವ ಮುಖಾಂತರ, ಮನೆಗೊಂದು ಮರ ಊರಿಗೊಂದು ವನ ಎಂಬುವ ಗಾದೆ ಮಾತು ಸತ್ಯ ಮಾಡಬೇಕು ಎಂಬುದನ್ನು ತಿಳಿಹೇಳುವ ಪ್ರಯತ್ನ ಮಾಡಿದರು.

# ಸೇವಾ ಸಂಗಮ ಸಂಸ್ಥೆ, ಕಲಬುರಗಿ

## "ಉಜ್ಜೀವನ ಕಾರ್ಯಕ್ರಮ"

## "ಉಸಿರಿಗಾಗಿ ಪರಿಸರ ರಕ್ಷಿಸೋಣ"

ಸೇವಾ ಸಂಗಮ ಸಂಸ್ಥೆ ಕಲಬುರಗಿ, ಕಳೆದ 17 ವರ್ಷಗಳಿಂದ ಕಲಬುರಗಿ ಧರ್ಮಕ್ಷೇತ್ರದಲ್ಲಿ ಸಮಾಜ ಸೇವೆಯನ್ನು ಮಾಡುತ್ತಿದೆ. ವಿಶೇಷವಾಗಿ ಮಹಿಳೆಯರು, ಸ್ವ-ಸಹಾಯ ಸಂಘಗಳು, ಸಣ್ಣ ರೈತರು, ವಿಕಲ ಚೇತನರು, ಮಹಿಳಾ ಸಬಲೀಕರಣಕ್ಕಾಗಿ ಸೇವೆ ಸಲ್ಲಿಸುತ್ತಾ ಬಂದಿದೆ. ಕಲಬುರಗಿ ತಾಲೂಕಿನ ನಂದಿಕೂರ ಗ್ರಾಮ ಪಂಚಾಯತ ಮತ್ತು ನಂದಿಕೂರ ಗ್ರಾಮದಲ್ಲಿ "ವಿಶ್ವ ಪರಿಸರ ದಿನಾಚರಣೆ" ಅತಿ ವಿಜ್ರಂಭಣೆಯಿಂದ ಆಚರಿಸಲಾಯಿತು. ಪರಿಸರ ದಿನಾಚರಣೆ ಕೇವಲ ಒಂದು ದಿನ ಆಚರಣೆ ಮಾಡಿ ಬಿಡುವುದಲ್ಲ, ಪ್ರತಿ ದಿನ ಪರಿಸರ ದಿನಾಚರಣೆ ಅಭಿಯಾನದ ರೀತಿಯಲ್ಲಿ ತಮ್ಮ ಜೀವನದ ಭಾಗವಾಗಿ ಮಾಡಿಕೊಳ್ಳಬೇಕೆಂದು ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಸಂದೀಪ ಗುತ್ತೆದಾರ ಅರಿವು ಮೂಡಿಸಿದರು. ಇದೇ ಸಂದರ್ಭದಲ್ಲಿ 20 ಜನರಿಗೆ ಸಸಿಗಳನ್ನು ವಿತರಣೆ ಮಾಡಿ, ನಿಮ್ಮ ಸುತ್ತ ಮುತ್ತಲಿನ ವಾತವರಣವನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯ ಆಗಿದೆ. ನಮ್ಮ ಆಸ್ತಿಯನ್ನು ನಾವು ಹೇಗೆ ಕಾಪಾಡಿಕೊಳ್ಳುತ್ತೇವೆ ಹಾಗೆಯೇ ನಾವು ಪರಿಸರವನ್ನು ಕಾಪಾಡಿಕೊಳ್ಳಬೇಕೆಂದು ಸೇವಾ ಸಂಗಮ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್ ರವರು ಜನರ ಮನ ಮುಟ್ಟುವಂತೆ ಮಾತನಾಡಿದರು.





## "ಪರಿಸರದ ಕಾಳಜಿ ಜೀವನದ ಭಾಗವಾಗಲಿ"



ಸೇವಾ ಸಂಗಮ ಸಂಸ್ಥೆ ಕಲಬುರಗಿ ಕಳೆದ 17 ವರ್ಷಗಳಿಂದ ಕಲಬುರಗಿ ಧರ್ಮಕ್ಷೇತ್ರದಲ್ಲಿ ಸಮಾಜ ಸೇವೆ ಮಾಡಿಕೊಂಡು ಬರುತ್ತಿದೆ. ಜೂನ್ 5.2024 ರಂದು ಕಲಬುರಗಿ ಜಿಲ್ಲೆಯ ಧರ್ಮಪೂರ ಗ್ರಾಮದ ಸಮುದಾಯ ಭವನದಲ್ಲಿ ಹಾಗೂ ನಂದಿಕೂರ ಗ್ರಾಮದಲ್ಲಿ ಶ್ರೀಮತಿ ಜ್ಯೋತಿ ಅವರ ಮನೆ ಹತ್ತಿರ ಸಸಿ ನೆಡುವ ಮೂಖಾಂತರ ಸೇವಾ ಸಂಗಮ ಸಂಸ್ಥೆಯು ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು. ಸಹ ನಿರ್ದೇಶಕರು ಫಾದರ್ ದೀಪಕ್ ವಿಶ್ವ ಪರಿಸರ ದಿನಾಚರಣೆ 1972 ರಲ್ಲಿ ಜೂನ್ 5 ರಂದು ವಿಶ್ವ ಪರಿಸರ ದಿನಾಚರಣೆ ಆಚರಿಸಲು ವಿಶ್ವಸಂಸ್ಥೆಯಿಂದ ಪ್ರಾರಂಭಿಸಲಾಯಿತು, ಇದರ ಹಿಂದಿನ ಉದ್ದೇಶವೇನೆಂದರೆ ಪ್ರತಿಯೊಬ್ಬರು ಪರಿಸರದ ಕುರಿತು ಕಾಳಜಿ ವಹಿಸಿ, ಪರಿಸರವನ್ನು ಉನ್ನತೀಕರಣ ಮಾಡುವುದು ಆಗಿದೆ, ಪ್ರತಿಯೊಬ್ಬರು ಮನೆಗಳಲ್ಲಿ ಶಾಲೆಗಳಲ್ಲಿ ಸಸಿಗಳನ್ನು ಹಚ್ಚಬೇಕು, ಕಾಡು ಬೆಳೆಸಿ ನಾಡು ಉಳಿಸಿ ಎಂದು ಜಾಗೃತಿ ಮೂಡಿಸಿದ್ದರು, ಸಮುದಾಯ ಭವನ ಅವರಣದಲ್ಲಿ 10 ಸಸಿಗಳನ್ನು ನೆಡಲಾಯಿತು. ರೈತ ಮಹಿಳೆಯರಿಗೆ 20 ಸಸಿಗಳನ್ನು ವಿತರಣೆ ಮಾಡಿದರು. ಈ ಕಾರ್ಯಕ್ರಮದಲ್ಲಿ ಗ್ರಾಮ ಒಕ್ಕೂಟ ಸಂಘದ ಅಧ್ಯಕ್ಷರಾದ ಶ್ರೀಮತಿ ಶಾಹಜನ ಬೇಗಂ, ಗ್ರಾಮದ ಮುಖಂಡರು ಸೇವಾ ಸಂಗಮ ಸಂಸ್ಥೆ ಉಜ್ಜೀವನ ಕಾರ್ಯಕ್ರಮದ ಸಂಯೋಜಕರಾದ ಚಂದ್ರಕಾಂತ್ ಕಾರ್ಯಕರ್ತರಾದ ಇಂದು ಹಾಗೂ ನಂದಿನಿ ರವರು ಭಾಗವಹಿಸಿದರು.



## " ಪರಿಸರ ಸಂರಕ್ಷಣೆಯಿಂದ ಮಾನವನ ಉಳಿವು"

ಜೂನ್ 5.2024 ರಂದು ಫರಹತಬಾದ ಗ್ರಾಮದಲ್ಲಿ, ಸೇವಾ ಸಂಗಮ ಸಂಸ್ಥೆಯ, ಉಜ್ಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ನವೀನ್‌ರವರು, ಸಮುದಾಯದ ರೈತರಿಗೆ ಮತ್ತು ಮಹಿಳೆಯರಿಗೆ 10 ಸಸಿಗಳನ್ನು ನೀಡುವ ಮೂಲಕ, ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು. 1972 ರಲ್ಲಿ ವಿಶ್ವಸಂಸ್ಥೆ ಸಾಮಾನ್ಯ ಸಭೆಯಲ್ಲಿ 143 ದೇಶಗಳ ಪ್ರತಿನಿಧಿಗಳು ಪಾಲ್ಗೊಂಡದ್ದರು.ಮಾನವ ಮತ್ತು ಪರಿಸರದ ಸುದಿರ್ಘಚರ್ಚೆ ನಡೆದು ನಿರ್ಣಯಕ್ಕೆ ಬರಲಾಯಿತ್ತು .ಆ ನಿರ್ಣಯವೆನೆಂದರೆ ಜೂನ 05 ರಂದು ಜಗತ್ತಿನಾದ್ಯಂತ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸುವುದು. ಇದರ ಮೂಲ ಉದ್ದೇಶವೇನೆಂದರೆ ಪ್ರತಿಯೊಬ್ಬರಲ್ಲಿ ಪರಿಸರ ಕುರಿತು ಜಾಗೃತಿ ಮೂಡಿಸುವುದಾಗಿತ್ತು. ಮಾನವನು ನೆಮ್ಮದಿಯ ಜೀವನವನ್ನು ನಡೆಸಬೇಕಾದರೆ ಪರಿಸರವನ್ನು ಉಳಿಸಿ ಬೆಳೆಸಬೇಕಾಗುತ್ತದೆ ಇದು ಇಂದಿನ ತುರ್ತು ಅಗತ್ಯವಾಗಿದೆ ಎಂದು ಈ ಸಂದರ್ಭದಲ್ಲಿ ಕಾರ್ಯಕರ್ತರು ಮಾಹಿತಿ ನೀಡಿದರು. ಇರುವುದೊಂದೇ ಭೂಮಿ, ಇದನ್ನು ಮುಂದಿನ ಪೀಳಿಗೆಗೆ ಉಳಿಸಿಕೊಂಡು ಹೋಗುವುದು ನಮ್ಮೆಲ್ಲರ ಕರ್ತವ್ಯ. ಗ್ರಾಮದ ಹಸಿರು ಅಭಿಯನಕ್ಕೆ ಪ್ರತಿಯೊಂದು ಕುಟುಂಬ ಜೂನ 05 ರಂದು ಪರಿಸರ ದಿನಾಚರಣೆಯನ್ನು ಸಸಿಗಳನ್ನು ನೆಡುವ ಮೂಲಕ ಆಚರಿಸಬೇಕೆಂದು ಗ್ರಾಮಸ್ಥರಲ್ಲಿ ಮನವಿ ಮಾಡಿದರು.



## "ರೈತ ಸಂಪರ್ಕ ಕೇಂದ್ರದ ಸೌಲಭ್ಯಗಳು"



ಕಲಬುರಗಿ ಜಿಲ್ಲೆಯ ನಂದಿಕುರ್ ಗ್ರಾಮದ ಸ್ವಯಂ ಸೇವಕರಿಗೆ ಮತ್ತು ರೈತರಿಗೆ ಉಜ್ಜೀವನ ಕಾರ್ಯಕ್ರಮದ ಸಂಯೋಜಕರಾದ ಚಂದ್ರಕಾಂತ್ ಮತ್ತು ಶ್ರೀಮತಿ ಇಂದು ರವರು, ಸ್ವಯಂ ಸೇವಕರಿಗೆ ಹಾಗೂ ರೈತರಿಗೆ ಕೃಷಿ ಇಲಾಖೆಯಲ್ಲಿ ಸಿಗುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿದರು. ಈ ಮಾಹಿತಿಯನ್ನು ಪಡೆದುಕೊಂಡ ಸಮುದಾಯದ ರೈತರು ಸ್ಪಿಂಕಲಿಂಗ್ ಪೈಪ್ ಮತ್ತು ರಾಶಿ ತಾಡಪತ್ರಿ ಮತ್ತು ಬಿತ್ತನೆ ಬೀಜಗಳು ಪಡೆದುಕೊಳ್ಳಲು ಅರ್ಜಿ ಸಲ್ಲಿಸಿದರು. ಇದರಲ್ಲಿ ಒಬ್ಬ ರೈತಮಹಿಳೆ ಅಜುಂ ಅವರಿಗೆ ರೈತ ಸಂಪರ್ಕಕೇಂದ್ರದಿಂದ 30 ಸ್ಪಿಂಕ್ಲರ್ ಪೈಪಗಳನ್ನು (ಇದರ ಮೊತ್ತ 18000 ರೂ) ಅರ್ಜಿ ಸಲ್ಲಿಸಿರುವುದರಿಂದ ಸಬ್ಸಿಡಿಯಲ್ಲಿ ಪೈಪಗಳನ್ನು ಪಡೆದುಕೊಂಡರು. ರೈತ ಸಂಪರ್ಕ ಕೇಂದ್ರದಿಂದ ಈ ಸೌಲಭ್ಯ ಪಡೆಯುವುದರೊಂದಿಗೆ ಇವರು ಹಲವು ರೈತರಿಗೆ ಪ್ರೇರಣೆಯಾದರು.

## "ಸ್ವಚ್ಚ ಭಾರತ ಅಭಿಯಾನದ ಯೋಜನೆ"



ಮಹಾತ್ಮಾಗಾಂಧಿಜೀಯವರ 150ನೇ ಜನ್ಮ ದಿನದ ವಾರ್ಷಿಕೋತ್ಸವದ ಅಂಗವಾಗಿ ಮೊದಲನೇ ಹಂತ ಸ್ವಚ್ಚ ಭಾರತ ಆಂದೋಲನ (ಅರ್ಬನ್) ನಗರ ಭಾರತವನ್ನು ಬಯಲು ಶೌಚದಿಂದ ಮುಕ್ತಗೊಳಿಸಲು ಮತ್ತು ದೇಶದಾದ್ಯಂತ 4000 ನಗರಗಳಲ್ಲಿ ಪುರಸಭೆಯ ಘನ ತ್ಯಾಜ್ಯದ 100% ವೈಜ್ಞಾನಿಕ ನಿರ್ವಹಣೆಯ ಗುರಿಯನ್ನು ಹೊಂದಿದೆ. ಅಕ್ಟೋಬರ್ 02.2019 ರೊಳಗೆ 66 ಲಕ್ಷ ವೈಯಕ್ತಿಕ ಮನೆಗಳ ಶೌಚಾಲಯಗಳನ್ನು ನಿರ್ಮಿಸುವುದು ಇದರ ಗುರಿಗಳಯಲ್ಲಿ ಒಂದಾಗಿದೆ. ನಂದಿಕೂರ ಗ್ರಾಮ ಪಂಚಾಯತಿ ಅಡಿಯಲ್ಲಿ ಗ್ರಾಮದ ಜನರಿಗೆ ಸ್ವಚ್ಚ ಭಾರತ ಅಭಿಯನದ ಅಡಿಯಲ್ಲಿ ಶೌಚಲಯಗಳ ಕುರಿತು ನಂದಿಕೂರ, ಸಿತನೂರ, ಉದನೂರ ಗ್ರಾಮಗಳಯಲ್ಲಿ ಉಜ್ಜೀವನ ಕಾರ್ಯಕ್ರಮದ ಸಿಬ್ಬಂಧಿ ವರ್ಗದವರು 95 ಜನರಿಗೆ ಇದರ ಕುರಿತು ಮಾಹಿತಿ ನೀಡಿದರು. ಸ್ವಚ್ಚ ಭಾರತ ಅಭಿಯನದ ಅಡಿಯಲ್ಲಿ ಶೌಚಲಾಯಕ್ಕೆ 36 ಜನರ ಅರ್ಜಿ ಸಲ್ಲಿಸಿದರು.

# "ಸ್ಪರ್ಶ ಕ್ಯಾನ್ಸರ್ ಕಾರ್ಯಕ್ರಮ"

## "ಕ್ಯಾನ್ಸರ್ ಮುಕ್ತ ಸೆಂಟ್ ಮೇರಿ ಶಾಲೆಯಲ್ಲಿ, ತಂಬಾಕು ನಿಷೇದ ಕಾರ್ಯಕ್ರಮವ"



ಜೂನ್ 20.2024 ರಂದು ಕಲಬುರಗಿ ಜಿಲ್ಲೆಯ ಸೆಂಟ್ ಮೇರಿ ಶಾಲೆಯಲ್ಲಿ, ತಂಬಾಕು ನಿಷೇದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಡಾಕ್ಟರ್ ಸಂಧ್ಯಾ ಕಾನೇಕರ್ ಮತ್ತು ಶ್ರೀಮತಿ ಸುಜಾತ ಪಾಟೀಲ್ ಜಿಲ್ಲಾ ತಂಬಾಕು ನಿಷೇಧ ಕೋಶ ಸಲಹೆಗಾರರು ಕಲಬುರಗಿ, ಇವರು ಮಕ್ಕಳಿಗೆ ತಂಬಾಕು ತ್ಯಜಿಸುವುದು ಮತ್ತು ತಂಬಾಕು ತ್ಯಜಿಸುವುದರಿಂದ ಆಗುವ ಪ್ರಯೋಜನಗಳ ಬಗ್ಗೆ ಹಾಗೂ ಧೂಮಪಾನ ಮತ್ತು ತಂಬಾಕು ಸೇವನೆಯಿಂದ ಆರೋಗ್ಯದ ಮೇಲೆ ಆಗುವ ದುಷ್ಪರಿಣಾಮಗಳ ಬಗ್ಗೆ ಮಾಹಿತಿ ನೀಡಿದರು.



ತಂಬಾಕು ಸೇವನೆಯಿಂದ ಕ್ಯಾನ್ಸರ್, ಹೃದಯ ಸಂಬಂಧಿ ಕಾಯಿಲೆಗಳು, ಶ್ವಾಸಕೋಶದ ಕಾಯಿಲೆಗಳಿಗೆ ತಂಬಾಕು ಸೇವನೆ ಪ್ರಮುಖಕಾರಣವಾಗಿದೆ ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಸೆಂಟ್ ಮೇರಿ ಶಾಲೆಯ ಮುಖ್ಯೋಪಾಧ್ಯಾಯರು ಸಿಸ್ಟರ್ ಫಿಲೋಮಿನ ಮಿನೆಜಸ್,ಹಾಗೂ ಶಾಲೆಯ ಶಿಕ್ಷಕರು, ಹಾಗೂ ಸೇವಾ ಸಂಗಮ ಸಂಸ್ಥೆಯ ಸ್ಪರ್ಶ ಕಾರ್ಯಕ್ರಮದ ಸಂಯೋಜಕೀಯಾದ ಶ್ರೀಮತಿ ಸ್ವಾತಿ, ಮತ್ತು ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಸಂಯೋಜಕಿಯಾದ ಶ್ರೀಮತಿ ಶ್ವೇತಾ, ಹಾಗೂ 280 ಮಕ್ಕಳು ಭಾಗವಹಿಸಿ ಮಾಹಿತಿ ಪಡೆದುಕೊಂಡರು.

## “ಕ್ಯಾನ್ಸರ್ ರೋಗದ ದುಷ್ಪರಿಣಾಮಗಳ ಹಾಗೂ ಸೂಕ್ತ ಚಿಕಿತ್ಸೆಯ ಕುರಿತು ಜಾಗೃತಿ”



ಜೂನ್ 24.2024 ರಂದು ಕಲಬುರ್ಗಿ ತಾಲೂಕಿನ, ಸಿತನೂರ್ ಗ್ರಾಮದಲ್ಲಿ ರೈತರಿಗೆ ಹಾಗೂ ಊರಿನ ಮುಖಂಡರಿಗೆ, ಸೇವಾ ಸಂಗಮ ಸಂಸ್ಥೆಯ ಕ್ಯಾನ್ಸರ್ ಕಾರ್ಯಕ್ರಮದ ಸಂಯೋಜಕಿಯಾದ, ಶ್ರೀಮತಿ ಸ್ವಾತಿ ಅವರು ಕ್ಯಾನ್ಸರ್ ಕುರಿತಯ ಜಾಗೃತಿ ಮೂಡಿಸಿದರು. ಈ ಕಾರ್ಯಕ್ರಮದಲ್ಲಿ ಕ್ಯಾನ್ಸರ್ ರೋಗದ ದುಷ್ಪರಿಣಾಮಗಳನ್ನು ಹಾಗೂ ಸೂಕ್ತ ಚಿಕಿತ್ಸೆಯ ಕುರಿತು ಜಾಗೃತಿ ಮೂಡಿಸಿದರು. ಕ್ಯಾನ್ಸರ್ ರೋಗ ಬರಲುಕಾರಣವಾಗುವ ವಿಷಯಗಳ ಬಗ್ಗೆ ತಿಳಿಸಿ, ನಶೆಯ ಪದಾರ್ಥಗಳಿಂದ ದೂರವಿರುವಂತೆ ಸಲಹೆ ನೀಡಿದರು ಹಾಗೂ ಪ್ಲಾಸ್ಟಿಕ್ ಅತಿಯಾಗಿ ಬಳಸುವುದರಿಂದ ಕ್ಯಾನ್ಸರ್ ಸಂಭವಿಸುತ್ತದೆ ಹಾಗಾಗಿ ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಜೈವಿಕ ವಸ್ತುಗಳಿಗೆ ಆದ್ಯತೆ ನೀಡಬೇಕು ಎಂದು ಜಾಗೃತಿ ಮೂಡಿಸಿದ್ದರು. ಮನೆಯಲ್ಲಿ ಕೈತೋಟವನ್ನು ನಿರ್ಮಾಣ ಮಾಡಿಕೊಂಡು, ಅದರಿಂದ ಬಂದ ತರಕಾರಿಯನ್ನು ಸೇವಿಸುವುದರಿಂದ ಉತ್ತಮ ಆರೋಗ್ಯ ಕಾಪಾಡಿಕೊಳ್ಳಬಹುದು ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ 20 ಜನ ರೈತರು ಮತ್ತು ಊರಿನ ಮುಖಂಡರು ಭಾಗವಹಿಸಿ ಕಾರ್ಯಕ್ರಮದ ಪ್ರಯೋಜನ ಪಡೆದುಕೊಂಡರು. ಇದೇ ಸಂದರ್ಭದಲ್ಲಿ ಬಡ ಕುಟುಂಬದ ಕ್ಯಾನ್ಸರ್ ರೋಗಿಗಳಿಗಾಗಿ ದೇಣಿಗೆ ಸಂಗ್ರಹಣೆ ಮಾಡಲಾಯಿತು.

# ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ

## “ಮಕ್ಕಳ ಬಾಳನ್ನೂ ರೂಪಸಿವುದೇ ತಾಯಿಯ ಅಂತಿಮ ಧ್ಯೇಯ..”

ಕಲಬುರಗಿ: ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮಜಿ ಫೌಂಢೇಶನ್ ಇವರ ಸಂಯುಕ್ತಾಶ್ರಯದಲ್ಲಿ ಶೀಘ್ರ ಪತ್ತೆ ಹಚ್ಚವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದ ಕುರಿತು ಜಾಗೃತಿ ಕಾರ್ಯಕ್ರಮವನ್ನು ಜೂನ್ 19.2024 ರಂದು ಅಸೋಸಿಯೇಷನ್ ಆಫ್ ಫೀಪಲ್ ವಿತ್ ಡಿಸೆಬಿಲಿಟಿ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಪಾಲ್ಗೊಂಡ ಪಾಲಕರನ್ನು ಉದ್ದೇಶಿಸಿ ಮಾತನಾಡಿದ ಶ್ರೀ ರಾಕುಮಾರ ಮಕ್ಕಳ ಓದು-ಬರಹ ಸುಖ-ಸಂತೋಷ, ಬಾಳು-ಭವಿಷ್ಯ ಇದನೇಲ್ಲಾ ಒದಗಿಸಿಕೊಡುವುದು ತಾಯಂದಿರ ಕರ್ತವ್ಯ ಅದೇ ಆಕೆಯ ಅಂತಿಮ ಧ್ಯೆಯಾವಾಗಬೇಕು. ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳ ಅಭಿವೃದ್ಧಿಗೆ, ಅಭ್ಯುದಯಕ್ಕೆ ವ್ಯವಸ್ಥಿತವಾದ ವಾತವರಣವನ್ನು ನಿರ್ಮಿಸಿಕೊಡುವ ಕಾರ್ಯವನ್ನು ಸೇವಾಸಂಗಮ ಸಂಸ್ಥೆ ಮಾಡುತ್ತಿದೆ. ಕುಂಠಿತವಿರುವ ಮಕ್ಕಳನ್ನು ಗುರುತಿಸಿ ಪಾಲಕರಿಗೆ ಇದರ ಕುರಿತು ಅರಿವನ್ನು ನೀಡುವ ಮೂಲಕ ಅವರ ಮಕ್ಕಳಿಗೆ ಉತ್ತೇಜಕ ಚಟುವಟಿಕೆಯನ್ನು ನೀಡಿ ಮಕ್ಕಳಿಗೆ ಇರುವ ನ್ಯೂನತೆಯಿಂದ ಮುಕ್ತಗೊಳಿಸುವುದೇ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ. ತಮ್ಮ ಮಕ್ಕಳಲ್ಲಿ ಅಥವಾ ಅಕ್ಕ-ಪಕ್ಕದಲ್ಲಿ ಇಂತಹ ಕುಂಠಿತ ಮಕ್ಕಳು ಕಂಡು ಬಂದರೆ ಕೂಡಲೆ ಸಂಸ್ಥೆಯ ಗಮನಕ್ಕೆ ತರಬೇಕು ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಎ.ಪಿ.ಡಿ ಸಂಸ್ಥೆಯ ಶ್ರೀ ಚನ್ನವಿರ ಹಾಗೂ 20 ಜನ ಪಾಲಕರು ಭಾಗವಹಿಸಿದರು.





## "ತಿರಸ್ಕರಿಸಿದವರು ಸ್ವಿಕರಿಸಿದಾಗ"



ಕಲಬುರಗಿ ತಾಲ್ಲೂಕಿನ ತಾಡತೆಗನೂರ ಗ್ರಾಮದ ನಿವಾಸಿಗಳಾದ ಶ್ರೀಮತಿ ಅಶ್ವಿನಿ ಹಾಗೂ ಶ್ರೀ ಚಂದ್ರಕಾಂತ್ ದಂಪತಿಗಳಿಗೆ ಜನಿಸಿದ ಮಗು ಕು.ಸಂತೋಷ 2. ವರ್ಷ 6 ತಿಂಗಳು. (ಹೆಸರನ್ನು ಬದಲಿಸಲಾಗಿದೆ ) ಈ ಮಗು ಬೇಳವಣಿಗೆಯಲ್ಲಿ ಕುಂಠಿತವಿದ್ದು ಅಪೌಷ್ಠಿಕತೆಯಿಂದ ಬಳಲುತಿತ್ತು. ಮಗುವನ್ನು ಗುರುತಿಸಿ ಪಾಲಕರಿಗೆ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದ ಕುರಿತು ಅರಿವನ್ನು ನೀಡಲಾಯಿತು. ತಮ್ಮ ಮಗುವಿನ ಬೆಳವಣಿಗೆ ಹಂತ ಕುಂಠಿತವಾಗಿರುವ ಬಗ್ಗೆ ಮಾಹಿತಿ ನೀಡಿದಾಗ, ಅವರು ತಮ್ಮ ಮಗುವಿಗೆ ಯಾವುದೇ ರೀತಿಯ ತೊಂದರೆಗಳು ಇಲ್ಲ ಎಂದರು, ಮಗುವಿನ ಬೆಳವಣಿಗೆ ಹಂತಗಳನ್ನು ವಿವರಿಸಿದಾಗಲೂ ಅವರು ಒಪ್ಪಿಕೋಳ್ಳುವುದಕ್ಕೆ ನಿರಾಕರಿಸಿದರು. ಪ್ರತಿ ಬಾರಿ ಗ್ರಾಮಕ್ಕೆ ಹೊದಾಗ ಮಗುವಿನ ಮನೆ ಭೇಟಿ ಮಾಡುವುದನ್ನು ನಾನು ತಪ್ಪಿಸಲಿಲ್ಲ, ಇದಕ್ಕೆ ಎರಡು ಮುಖ್ಯ ಕಾರಣಗಳಿವೆ ಒಂದು ಕಾರ್ಯಲಯದ ಒಂದು ಸಭೆಯಲ್ಲಿ ಸಂಸ್ಥೆಯ ನಿರ್ದೇಶಕರು ಹೇಳಿದರು ಪಾಲಕರು ಸಹಕರಿಸದೇ ಇದ್ದರೆ ನೀವು ಮಕ್ಕಳನ್ನು ತ್ಯಜಿಸದಿರಿ ಬದಲಾಗಿ ಪಾಲಕರ ಮನವೊಲಿಸುವ ಪ್ರಯತ್ನವನ್ನು ಮಾಡಿ ಎಂದು, ಇನ್ನೊಂದು ಮಗುವಿನ ಭವಿಷ್ಯದ ಕುರಿತು ಯೋಚಿಸಿ ಎಂದು. ಅವರ ಮನೆ ಭೇಟಿ ಮಾಡುವುದನ್ನು ನಾನು ತಪ್ಪಿಸಲಿಲ್ಲ ,ಅದರ ಪ್ರತಿ ಫಲವಾಗಿ ನಾನು ಅವರ ನಂಬಿಕೆಯನ್ನು ಸಾಧಿಸಿದೆ. ತದನಂತರ ನಿಧಾನವಾಗಿ ಮಗುವಿಗೆ ಉತ್ತೇಜಕ ಚಟುವಟಿಕೆ ಮತ್ತು ಪೌಷ್ಠಿಕ ಆಹಾರವನ್ನು ನೀಡಲು ಪ್ರಯತ್ನಿಸಿದೆ ಇದಕ್ಕೆ ಪಾಲಕರು ಸಹಕರಿಸಲು ಪ್ರಾರಂಬಿಸಿದರು. ನಿರ್ದೇಶಕರ ಆ ಮಾತು ನನ್ನ ನಂಬಿಕೆ ಹಾಗೂ ಪಾಲಕರ ಸಹಕಾರ ಈ ಮೂರು ಮಗುವಿನ ಪಾಲಿಗೆ ಮೃತ್ಯುಂಜಯವಾಗಿ ಕಾರ್ಯನಿರ್ವಹಸಿವೆ. ಮಗುವನ್ನು ನಾವು ಗುರುತಿಸಿದಾಗ 7.5 ಕೆ.ಜಿ. ತೂಕವಿತ್ತು. ಪಾಲಕರು ಸಂಸ್ಥೆ ನೀಡಿದ ಪೌಷ್ಠಿಕ ಆಹಾರವನ್ನು ನೀಡಿದ ಕಾರಣ ಈಗ ಮಗುವಿನ ತೂಕ 11.5 ಕೆ.ಜಿ.ಯಾಗಿದೆ. ಈ ಬದಲಾವಣೆಯನ್ನು ನೋಡಿ ಪಾಲಕರು ಸಂತೋಷವನ್ನು ವ್ಯಕ್ತಪಡಿಸುತ್ತಿದ್ದಾರೆ.

## "ಚೇತನ ಕೇಂದ್ರದ ಉದ್ಘಾಟನಾ ಕಾರ್ಯಕ್ರಮ"




ಕಲಬುರಗಿ ನಗರದ ಸೇಂಟ್ ಮೇರಿ ಶಾಲೆಯ ಆವರಣದಲ್ಲಿ ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಂ ಪ್ರೇಮಜಿ ಫೌಂಢೇಶನ ಸಂಯುಕ್ತ ಆಶ್ರಯದಲ್ಲಿ ಚೇತನ ಕೇಂದ್ರದ ಉದ್ಘಾಟನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತು. ಕಾರ್ಯಕ್ರಮದ ಉದ್ಘಾಟಕರಾಗಿ ಪರಮ ಪೂಜ್ಯ ಕಲಬುರಗಿ ಧರ್ಮಕ್ಷೇತ್ರದ ಧರ್ಮಾಧ್ಯಕ್ಷರು ಹಾಗೂ ಸೇವಾ ಸಂಗಮ ಸಂಸ್ಥೆಯ ಅಧ್ಯಕ್ಷರಾದ ಬಿಷಪ್ ರಾಬರ್ಟ ಮೈಕಲ್ ಮಿರಂದಾ ರವರು ಚೇತನ ಕೇಂದ್ರವನ್ನು ಉದ್ಘಾಟಿಸಿ ಮಾತನಾಡಿದರು. ಸೇವಾ ಸಂಗಮ ಸಂಸ್ಥೆಯು ಬೆಳವಣಿಗೆಯಲ್ಲಿ ಕುಂಠಿತ ಮಕ್ಕಳ ಅಭಿವೃದ್ಧಿಗಾಗಿ ಕಾರ್ಯ ನಿರ್ವಹಿಸುತ್ತಿದ್ದು, ಸಮಾಜದಲ್ಲಿ ಅಂತಹ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುತ್ತಿದೆ. ಇಲ್ಲಿ ಗಮನಿಸಬೇಕಾದ ವಿಷಯವೇನೆಂದರೆ ಇದರ ಕುರಿತು ಪಾಲಕರಿಗೆ ಅರಿವು ಇಲ್ಲದೇ ಇರುವುದಾಗಿದೆ, ಈ ಮಕ್ಕಳಿಗೆ ಸರಿಯಾದ ಸಮಯಕ್ಕೆ ಔಷದಿ ಉಪಚಾರ ಸಿಗದೆ ತಮ್ಮ ಬಾಲ್ಯವನ್ನು ವಿಶೇಷ ಮಕ್ಕಳಂತೆ ಕಳೆಯುವಂತಾಗಿದೆ.



ಅಂತಹ ಮಕ್ಕಳನ್ನು ಸರಿಯಾದ ಸಮಯಕ್ಕೆ ಗುರುತಿಸುವುದಕ್ಕಾಗಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಮೂಲಕ ಪಾಲಕರಿಗೆ ಅರಿವು ನೀಡುವುದರ ಜೊತೆಗೆ ಅವರ ಮನವೋಲಿಸಿ, ಆ ಮಕ್ಕಳಿಗೆ ಉತ್ತೇಜ ಕಚಟುವಟಿಕೆ ಹಾಗೂ ಪೂರ್ವ ಪ್ರಾಥಮೀಕ ಶಿಕ್ಷಣವನ್ನು ದೊರೆಯುವಂತಹ ಪರಿಸರವನ್ನು ನಿರ್ಮಾಣ ಮಾಡುವ ಕಾರ್ಯವನ್ನು ಸಂಸ್ಥೆಯು ಮಾಡಿಕೊಂಡು ಬರುತ್ತಿದೆ. ಇದ್ದರಿಂದ ಮಕ್ಕಳಿಗೆ ಚಟುವಟಿಕೆ ಮಾಡಲು ಬೇಕಾಗುವ ಸಾಮಾಗ್ರಿಗಳ ಕೊರತೆ ಕಂಡು ಬಂದದ್ದರಿಂದ ಮಕ್ಕಳಿಗೆ ಚಟುವಟಿಗೆ ಬೆಕಾಗುವ ಎಲ್ಲಾ ಸಾಮಗ್ರಿಗಳನ್ನು ದೊರೆಯುವಂತೆ ಮಾಡುವ ಉದ್ದೇಶದಿಂದ ಚೇತನ ಕೇಂದ್ರವನ್ನು ಪ್ರಾರಂಭಿಸಲಾಗಿದೆ. ಇದರ ಸದುಪಯೋಗವನ್ನು ಎಲ್ಲರು ಪಡೆದುಕೊಳ್ಳಿ ಎಂದು ತಿಳಿಸಿದರು. ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ ಶ್ರೀ ಅನುರಾಗ ಬಹಾರ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಅಜೀಂ ಪ್ರೇಮಜಿ ಫೌಂಢೇಶನ, ದೆಹಲಿ ಇವರು ಚೇತನ ಕೇಂದ್ರದಲ್ಲಿ ಬೆಳವಣಿಗೆಯಲ್ಲಿ



ಕುಂಠಿತಗೊಂಡಿರುವ ಮಕ್ಕಳ ಬದಲಾವಣೆಗಾಗಿ ಹೆಚ್ಚಿನ ಅವಕಾಶಗಳನ್ನು ಕಲ್ಪಿಸಲಾಗಿದ್ದು, ಕಲಬುರಗಿಯ ಜನರಿಗೆ ಇದೋಂದು ಸದವಕಾಶವಾಗಿದ್ದು, ಇದರ ಸದ್ಬಳಕೆಯೊಂದಿಗೆ ಇಂತಹ ಮಕ್ಕಳನ್ನು ಮುಖ್ಯವಾಹಿನಿಗೆ ಬರುವಂತೆ ಆಗಬೇಕು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಪಾದರ್ ಅನೀಲ ಕ್ರಾಸ್ತಾ ರವರು ಪ್ರಾಸ್ತವಿಕ ನುಡಿಯನ್ನು ನುಡಿದರು. ಶ್ರೀಮತಿ ಶ್ವೇತಾ ಯೋಜನಾ ವ್ಯವಸ್ಥಾಪಕರು, ಪಾದರ್ ವಿಕ್ಟರ್ ವಾಸ್ ನೀರ್ದೆಶಕರು, ಶ್ರಿ ರುದ್ರೇಶ ರಾಜ್ಯ ಸಂಯೊಜಕರು ಅಜಿಂ ಪ್ರೇಮಜೀ ಪೌಂಡೆಷನ ಕಲಬುರಗಿ, ಶ್ರೇಷ್ಠ ಗುರುಗಳಾದ ಫಾದರ ಸ್ವಾನಿ ಲೋಬೋ, ಶ್ರೀ ಸಂಜೀವ್ ಕುಲಕರ್ಣಿ, ಶ್ರೀಮತಿ ಶಿವಕಾಂತ ಮತ್ತು ಅನೀತಾ ಸಂಗಡಿಗರು ಪ್ರಾರ್ಥನಾಗೀತೆಯನ್ನು ಹಾಡುವ ಮೂಲಕ ಪ್ರಾರಂಭಿಸಿ, ಕು. ಲಕ್ಷ್ಮೀ ಅವರು ಸಂವಿಧಾನ ಪೀಠಿಕೆಯನ್ನು ಬೋಧಿಸಿ, ಶ್ರೀ ರಾಜಕುಮಾರ ನಿರೂಪಿಸಿ, ಶ್ರೀಮತಿ ಜಗದೇವಿ ಸ್ವಾಗತಿಸಿ, ಕು.ಅನೀತಾ ವಂಧಿಸಿದರು. ಕಾರ್ಯಕ್ರಮದಲ್ಲಿ ಮಕ್ಕಳು ಮತ್ತು ಪಾಲಕರು, ಸೇರಿ 50 ಜನರು ಭಾಗವಹಿಸಿದರು.

## “ಮೌಲ್ಯಮಾಪನ ಹಾಗೂ ಪ್ರಗತಿಯ ಕುರಿತು ಪರಿಶೀಲನೆ”



ಜೂನ್ 25.2024 ರಂದು ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯಲ್ಲಿ ಪ್ರಸ್ತುತವಾಗಿ ನಡೆಯುತ್ತಿರುವ ಕಾರ್ಯವೈಖರಿಯನ್ನು ಅವಲೋಕಿಸಲು ಅಜೀಂ ಪ್ರೇಮ್‌ಜೀ ಕಾರ್ಯಕ್ರಮದ ಸಂಯೋಜಕರಾದ ಶ್ರೀಯುತ ಅನೀಲ್, ಜಿಲ್ಲಾ ಸಂಯೋಜಕರಾದ ಮಹಾದೇವ ಮೂಲ್ಗೆ ಹಾಗೂ ಜಿಲ್ಲಾ ಸಂಯೋಜಕರಾದ ಸಂಜೀವ ಕುಲಕರ್ಣಿ ಅವರು ಕಲಬುರಗಿ ಯೋಜನೆಯ ಮೌಲ್ಯಮಾಪನ ಹಾಗೂ ಪ್ರಗತಿಯ ಕುರಿತು ಪರಿಶೀಲನೆ ಮಾಡಿದರು. ನಗರದ ಚೇತನ ಕೇಂದ್ರದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ತಂಡದೊಂದಿಗೆ ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳಲ್ಲಿ ಎಷ್ಟು ಮಕ್ಕಳು ಬದಲಾವಣೆ ಹೊಂದಿರುವ ಕುರಿತು ಮತ್ತು ಅವರಿಗೆ ನೀಡುತಿರುವ ಚಟುವಟಿಕೆ ಹಾಗೂ ಮಕ್ಕಳಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಪರಿಶೀಲನೆ ಮಾಡಿದರು. ಈ ಸಭೆಯಲ್ಲಿ ಸೇವಾ ಸಂಗಮ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್, ಸಂಸ್ಥೆಯ ಸಹ ನಿರ್ದೇಶಕರಾದ ಫಾದರ್ ದೀಪಕ್, ಯೋಜನಾ ವ್ಯವಸ್ಥಾಪಕರಾದ ಶ್ರೀಮತಿ ಶ್ವೇತಾ, ಶ್ರೀಮತಿ ಶಿವಕಾಂತಾ, ಶ್ರೀ ರಾಜಕುಮಾರ್ ದೇವರಮನಿ, ಕು.ಅನಿತಾ, ಶ್ರೀಮತಿ ಜಗದೇವಿ, ಶ್ರೀಮತಿ ದಾಕ್ಷಾಯಣಿ, ಲಕ್ಷ್ಮೀ ಹಾಗೂ ಪಾಲಕರು ಮತ್ತು ಮಕ್ಕಳು ಉಪಸ್ಥಿತರಿದ್ದರು.



## “ಮಕ್ಕಳ ಅಭಿವೃದ್ಧಿ ಅವರ ಭವಿಷ್ಯದ ಅಭ್ಯುದಯ ಬದುಕಿಗಾಗಿ”



ಕಲಬುರಗಿ: ಜೂನ್ 25 ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮಜಿ ಫೌಂಡೇಶನ ವತಿಯಿಂದ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕುರಿತು ಕು. ಅನಿತಾ ಅವರು ಅಂಬಿಕಾ ನಗರ ಅಂಗನವಾಡಿ ಕೇಂದ್ರ ಸಂಖ್ಯೆ 2 ರಲ್ಲಿ ಬೆಳವಣಿಗೆ ಕುಂಠಿತವಿರುವ ಮಕ್ಕಳ ಬಗ್ಗೆ ಮಾಹಿತಿ ನೀಡುವ ಕಾರ್ಯಕ್ರಮ ಹಮ್ಮಿಕೊಂಡಿದ್ದರು. ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅನಿತಾ ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳನ್ನು ಗುರುತಿಸುವುದು, ಆ ಮಕ್ಕಳಿಗೆ ಇವರು ನ್ಯೂನತೆಯನ್ನು ಪತ್ತೆ ಮಾಡುವುದಕ್ಕೆ ಬೆಳವಣಿಗೆ ಹಂತವನ್ನು ವಿಶ್ಲೇಷಣೆ ಮಾಡಲಾಗುತ್ತದೆ. ವಿಶ್ಲೇಷಣೆಯಲ್ಲಿ ಮಕ್ಕಳ ಮಾನಸಿಕ, ದೈಹಿಕ, ಬೌದ್ಧಿಕ, ಸಾಮಾಜಿಕ ಮತ್ತು ಭಾಷೆಯನ್ನು ಹಂತ–ಹಂತವಾಗಿ ವಿಶ್ಲೇಷಣೆ ಮಾಡಿದಾಗ ಮಗು ಯಾವ–ಯಾವ ಹಂತದಲ್ಲಿ ಕುಂಠಿತವಿದೆ ಎಂಬುವುದು ತಿಳಿಯುತ್ತದೆ. ಅದನ್ನಾ ಆಧರಿಸಿ ಮಕ್ಕಳಲ್ಲಿ ಕುಂಠಿತವಿರುವ ನ್ಯೂನತೆಯಿಂದ ಕೂಡಿದ ಭಾಗಕ್ಕೆ ಉತ್ತೇಜಕ ಚಟುವಟಿಕೆಯನ್ನು ನೀಡಲಾಗುತ್ತದೆ. ಇದನ್ನು ಹೊರತುಪಡಿಸಿ ಕೂಡ ಕೆಲವು ಮಕ್ಕಳು ಅಪೌಷ್ಟಿಕತೆಯಿಂದ ಕೂಡಿರುತ್ತಾರೆ ಅಂತಹ ಮಕ್ಕಳಿಗೆ ಚಟುವಟಿಕೆಯನ್ನು ಮಾಡಿಸಬೇಕಾದರೆ ಆ ಮಕ್ಕಳಲ್ಲಿ ಶಕ್ತಿಯ ಅವಶ್ಯಕತೆ ಇರುತ್ತದೆ, ಆದ್ದರಿಂದ ಮಕ್ಕಳಿಗೆ ಚಟುವಟಿಕೆಯ ಜೊತೆಗೆ ಪೌಷ್ಟಿಕ ಆಹಾರವನ್ನು ನಾವು ಒದಗಿಸುತ್ತಿದ್ದೇವೆ, ಮಕ್ಕಳ ಈಗಿನ ಅಭಿವೃದ್ಧಿ ಅವರ ಭವಿಷ್ಯದ ಅಭ್ಯುದಯ ಬದುಕಿಗಾಗಿ ಎಂದು ಹೇಳಿದರು. ಈ ಕಾರ್ಯಕ್ರಮದಲ್ಲಿ ಅಂಗನವಾಡಿ ಕಾರ್ಯಕರ್ತೆ ಶ್ರೀಮತಿ ಸುನಂದಾ ಹಾಗೂ ಪ್ರೀಯಾಂಕ ಸಿಸ್ಟರ್ ಎ.ಎನ್.ಎಮ್,. ಆಶಾಕಾರ್ಯಕರ್ತೆ ಶೋಭಾ ಉಪಸ್ಥಿತರಿದ್ದು, ಪಾಲಕರು ಮತ್ತು ಮಕ್ಕಳು ಸೇರಿ ಒಟ್ಟು 15 ಜನ ಭಾಗವಹಿಸಿದರು.

## ”ಮಕ್ಕಳಲ್ಲಿ ನ್ಯುನತೆಗಳನ್ನು ಪತ್ತೆ ಹಚ್ಚುವುದು”



ಜೂನ್.27.2024 ರಂದು ಸೇವಾ ಸಂಗಮ ಸಂಸ್ಥೆ ಮತ್ತು ಅಜೀಂ ಪ್ರೇಮ್‌ಜೀ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ .ಶ್ರೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆ ಕುರಿತು, ಸೀತನೂರ್ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ. ಜಾಗೃತಿ ಕಾರ್ಯಕ್ರಮನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದ ಬಗ್ಗೆ 1ರಿಂದ 5ನೇ ತರಗತಿಯ ವಿದ್ಯಾರ್ಥಿಗಳಿಗೆ ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳ ಬಗ್ಗೆ ಮಾಹಿತಿ ನೀಡಲಾಯಿತು. ನ್ಯೂನತೆ ಅಂದರೆ 0 ಯಿಂದ 6 ವರ್ಷದೊಳಗಿನ ಮಕ್ಕಳಲ್ಲಿ ಯಾವ ತರಹದ ನ್ಯೂನತೆ ಕಂಡು ಬರುತ್ತವೆ ಎಂದು ತಿಳಿ ಹೇಳಲಾಯಿತು. ಅಂದರೆ ಮೂರು ತಿಂಗಳಲ್ಲಿ ಮಗುವಿನ ಕತ್ತು ನಿಲ್ಲಬೇಕು, 9 ತಿಂಗಳಲ್ಲಿ ಮಗು ಅಂಬೆಗಾಲು ಹಾಕಬೇಕು, 13 ರಿಂದ 18 ತಿಂಗಳಿಗೆ ಮಗು ಮೆಟ್ಟಿಲನ್ನು ಹತ್ತಬೇಕು, 2 ವರ್ಷದಿಂದ 3 ವರ್ಷದಲ್ಲಿ ಎಲ್ಲಾ ತರಹದ ಮಾತುಗಳನ್ನು ಆಡಬೇಕು. 3ರಿಂದ 4 ವರ್ಷದ ಮಗುವು ತಾನಾಗಿಗೆ ಊಟ ಮಾಡಬೇಕು, 5 ರಿಂದ 6 ವರ್ಷದ ಮಗುವು ಅಕ್ಷರಗಳನ್ನು ಗುರುತಿಸಬೇಕು. ಈ ಎಲ್ಲಾ ಮೇಲಿನ ಅಂಶಗಳನ್ನು ಮಕ್ಕಳಲ್ಲಿ ಕಂಡು ಬರದೆ ಇದ್ದಲ್ಲಿ ಮಗುವಿನಲ್ಲಿ ಏನೋ ದೋಷವಿದೆ ಎಂದು ಅರಿತುಕೊಳ್ಳಬೇಕು. ಇಂತಹ ಮಕ್ಕಳು ನಿಮ್ಮ ಗ್ರಾಮಗಳಲ್ಲಿ ಕಂಡುಬಂದರೆ ನಮ್ಮ ಸೇವಾ ಸಂಗಮ ಸಂಸ್ಥೆಗೆ ತಿಳಿಸಿ ಎಂದು ವಿದ್ಯಾರ್ಥಿಗಳಿಗೆ ಮತ್ತು ಶಿಲ್ಪಕರಿಗೆ ಮಾಹಿತಿ ನೀಡಲಾಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 60 ವಿದ್ಯಾರ್ಥಿಗಳು ಭಾಗವಹಿಸಿ ಮಾಹಿತಿ ಪಡೆದುಕೊಂಡರು.

## "ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕುರಿತು ಜಾಗೃತಿ"



ಜೂನ್ 28.2024 ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮಜಿ ಫೌಂಡೇಶನ ಸಂಯುಕ್ತಾಶ್ರಯದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕುರಿತು ಕುಮಾರಿ ಲಕ್ಷ್ಮೀ ಅವರು ಜಾಫರಬಾದ ಗ್ರಾಮದಲ್ಲಿ ಬೆಳವಣಿಗೆ ಕುಂಠಿತವಿರುವ ಮಕ್ಕಳ ಬಗ್ಗೆ ಮಾಹಿತಿ ಕಾರ್ಯಕ್ರಮ ಹಮ್ಮಿಕೊಂಡಿದ್ದರು. 0–6 ವರ್ಷದೊಳಗಿನ ಬೆಳವಣಿಗೆ ಕುಂಠಿತವಿರುವ ಮಕ್ಕಳಲ್ಲಿ 3 ತಿಂಗಳಿಗೆ ಮಗುವಿನ ಕತ್ತು ನಿಂತಿರಬೇಕು, ಒಂದು ವೇಳೆ ಕತ್ತು ನಿಂತ್ತಿರಲಿಲ್ಲ ವಾದರೆ ಆ ಮಗುವಿಗೆ ವಿಶ್ಲೇಷಣೆ ಮಾಡುವುದರ ಮೂಲಕ ಮಗುವಿಗೆ ಉತ್ತೇಜಕ ತರಬೇತಿ ನೀಡುವುದು ಹಾಗೆಯೇ, ಯಾವ ಮಗುವಿಗೆ ಅವಶ್ಯಕತೆ ಇದೆಯೋ ಆ ಮಗುವಿಗೆ ಸಾದನೆ ಸಲಕರಣೆಗಳನ್ನು ಕೊಟ್ಟು ಚಟುವಟಿಕೆಯನ್ನು ಮಾಡಿಸಲಾಗುವುದು ಎಂದು ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿಒಟ್ಟು 36 ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## "ಚೇತನ" ಉಪ ಕೇಂದ್ರ ಉದ್ಘಾಟನೆ"




ಕಲಬುರಗಿ: ತಾಲ್ಲೂಕಿನಲ್ಲಿ ಸಾವಳಗಿ ಬಿ ಗ್ರಾಮದಲ್ಲಿ ಸೇವಾ ಸಂಗಮ ಸಂಸ್ಥೆ ಅಜೀಂ ಪ್ರೇಮ್‌ಜಿ ಫೌಂಡೇಶನ್ ಸಂಯುಕ್ತ ಆಶ್ರಯದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಉಪಕೇಂದ್ರ ಮತ್ತು ಚೇತನ ಉದ್ಘಾಟನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದಲ್ಲಿ ಬೆಳವಣಿಗೆ ಕುಂಠಿತ ಮಕ್ಕಳಿಗಾಗಿ ಸ್ಥಾಪಿಸಲಾದ ಚೇತನ ಉಪಕೇಂದ್ರ ನಾಮಫಲಕ ಅನಾವರಣಗೊಳಿಸುವ ಮೂಲಕ, ಉಪಕೇಂದ್ರವನ್ನು ಶ್ರೀ ಮಹಾದೇವಪ್ಪಾ ಮೂಲ್ಗೆ ಜಿಲ್ಲಾ ಸಂಯೋಜಕರು ಅಜೀಂ ಪ್ರೇಮ್‌ಜಿ ಫೌಂಡೇಶನ, ಕಲಬುರಗಿ ಇವರು ಉದ್ಘಾಟಿಸಿದರು. ನಂತರ ಮಾತನಾಡುತ್ತ ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳನ್ನು 0–6 ವರ್ಷದ ಒಳಗೆ ಗುರುತಿಸುವ ಮೂಲಕ ಆ ಮಕ್ಕಳನ್ನು ನ್ಯೂನತೆಯಿಂದ ಮುಕ್ತಗೊಳಿಸಲು ಈ ಕೇಂದ್ರ ಸಹಾಯಕಾರಿಯಾಗಿದೆ. ಚಟುವಟಿಕೆಗಳು ಹಾಗೂ ಆರಂಭಿಕ ಶಿಕ್ಷಣದಿಂದ ನ್ಯೂನ್ಯತೆ ಹೊಂದಿದ ಮಕ್ಕಳನ್ನು ಮುಖ್ಯವಾಹಿನಿಗೆ ತರಲು ಸಾಧ್ಯವಾಗುತ್ತದೆ. ಅವಶ್ಯಕತೆ ಇದ್ದಲ್ಲಿ ಸೈಂಟ್ ಮೇರಿ ಸ್ಕೂಲ್ ಕಲಬುರಗಿ ಬಳಿಯಿರುವ ಚೇತನ ಕೇಂದ್ರದಲ್ಲಿ ಹೆಚ್ಚಿನ ಸವಲತ್ತುಗಳನ್ನು ಉಚಿತವಾಗಿ ಈ ಮಕ್ಕಳಿಗೆ ನೀಡುತ್ತಿದ್ದು ಇದನ್ನು ಸರಿಯಾಗಿ ಉಪಯೋಗಿಸಿಕೊಳ್ಳಬೇಕು. ಈ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಶ್ರಮಿಸುತ್ತಿರುವ ಸೇವಾ ಸಂಗಮ ಸಂಸ್ಥೆಯ ಸೇವೆಯನ್ನು ಶ್ಲಾಘಿಸಿದರು. ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಫಾದರ ವಿಕ್ಟರ್‌ವಾಸ್ ನಿದೇಶಕರು ಸೇವಾಸಂಗಮ ಸಂಸ್ಥೆ ಕಲ್ಬುರ್ಗಿ, ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳು ಹಾಗೂ ಪಾಲಕರು ಕೇಂದ್ರದ ಸದುಪಯೋಗವನ್ನು ಪಡೆದುಕೊಳ್ಳುವಂತೆ ಸಲಹೆ ನೀಡಿದರು. ಈಗಾಗಲೇ ಸಾವಳಗಿ ಗ್ರಾಮ ಪಂಚಾಯತ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯಲ್ಲಿ ಬರುವ ಹೆಚ್ಚಿನ ಬೆಳವಣಿಗೆ ಕುಂಠಿತ ಮಕ್ಕಳನ್ನು ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತರ ಸಹಕಾರದಿಂದ ಪತ್ತೆ ಹಚ್ಚಲಾಗಿದ್ದು, ಈಗ ಪಾಲಕರ ಸಹಕಾರದಿಂದ ಆ ಮಕ್ಕಳಿಗೆ ಚೇತನ ಕೇಂದ್ರದಲ್ಲಿ ಚಟುವಟಿಕೆಗಳನ್ನು ನಡೆಸಲಾಗುವುದು ಎಂದು ತಿಳಿಸಿದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ಫಾದರ್ ದೀಪಕ್ ಸಹ ನಿರ್ದೇಶಕರು ಸೇವಾಸಂಗಮ ಸಂಸ್ಥೆ ಕಲಬುರಗಿ, ಇವರು ನುಡಿದರು, ಕಾರ್ಯಕ್ರಮದಲ್ಲಿ ಶ್ರೀ ಜಲಾಲ್ ಹಿರಿಯಾ ಆರೋಗ್ಯಾಧಿಕಾರಿಗಳು ಪ್ರಾಥಮಿಕ ಆರೋಗ್ಯಕೇಂದ್ರ ಸಾವಳಗಿ (ಬಿ), ಶ್ರೀ ಉಸ್ಮಾನಗಣಿ, ಶ್ರೀ ಯಲ್ಲಲಿಂಗ, ಶ್ರೀ ರಮೇಶ ಸದಸ್ಯರು ಗ್ರಾಮಪಂಚಾಯತ ಸಾವಳಗಿ, ಶ್ರೀ ಶಿವಾನಂದ ವಿ.ಆರ್.ಡಬ್ಲು, ಶ್ರೀಮತಿ ನೇತ್ರ ಮತ್ತು ಜನನಿ, ಸಂಪನ್ಮೂಲ ವ್ಯಕ್ತಿಗಳು ಸಕ್ಯ ಫೌಂಡೇಶನ ಬೆಂಗಳೂರು, ಶ್ರೀಮತಿ ಶ್ವೇತಾ ಕುಲಕರ್ಣಿ ಯೋಜನಾ ವ್ಯವಸ್ಥಾಪಕರು, ಕು. ಲಕ್ಷ್ಮಿ ಚೇತನ ಉಪಕೇಂದ್ರದ ಕಾರ್ಯಕರ್ತೆ ವೇದಿಕೆಯಲ್ಲಿ ಉಪಸ್ಥಿಸರಿದ್ದರು. ಕಾರ್ಯಕ್ರಮದಲ್ಲಿ ಬೆಳವಣಿಗೆ ಕುಂಠಿತ ಮಕ್ಕಳು ಹಾಗೂ ಪಾಲಕರು, ಗ್ರಾಮಸ್ಥರು, ಸೇವಾ ಸಂಗಮ ಸಂಸ್ಥೆಯ ಸಿಬ್ಬಂದಿಗಳು ಉಪಸ್ಥಿತರಿದರು.

## "ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕುರಿತು ಜಾಗೃತಿ"



ಕಲಬುರಗಿ ನಗರ ಪ್ರದೇಶದ ಮೀಲತ್ ನಗರ ಅಂಗನವಾಡಿ ಕೇಂದ್ರ 4 ರಲ್ಲಿ ಜೂನ 28 ರಂದು ಪೌಷ್ಠಿಕ ಆಹಾರ ಕುರಿತು ಅರಿವು ಕಾರ್ಯಕ್ರಮವನ್ನು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮಜಿ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಈ ಕಾರ್ಯಕ್ರಮವನ್ನು ಹಮ್ಮೀಕೊಳ್ಳಲಾಯಿತು. ಪ್ರಸುತ್ತವಾಗಿ ನಾವು ಸೇವಿಸುತ್ತಿರುವ ಆಹಾರದಲ್ಲಿ ಜೀವಸತ್ವ, ಪ್ರೋಟಿನ್ ಅಂಶ ತುಂಬಾ ಕಡಿಮೆ ಇದ್ದು, ನಾವು ಪ್ರತಿದಿನ ಪ್ರತಿಯೊಬ್ಬರು 2500 ಕ್ಯಾಲೋರಿ ಆಹಾರವನ್ನು ಸೇವಿಸಬೇಕಾಗಿದೆ. ಪೌಷ್ಠಿಕ ಆಹಾರವಾಗಿರುವಂತಹ ತರಕಾರಿಗಳಾದ ಬಿಟ್‌ರೂಟ್, ಹಸಿ ತರಕಾರಿಗಳು, ದಾಳಂಬರಿ, ಸೇಬು, ನೆನಸಿದ ಮೋಳಕೆ ಕಾಳಗಳು ತಿನ್ನುವುದು. ಮಕ್ಕಳಿಗೆ ಮತ್ತು ಮಹಿಳೆಯರಿಗೆ ಪ್ರಸುತ್ತವಾಗಿ ತುಂಬಾ ಅವಶ್ಯಕವಾಗಿದೆ. ಹಾಗೂ ತುಂಬಾ ಜನರಲ್ಲಿ ರಕ್ತಹೀನತೆ ಕಂಡು ಬರುತ್ತಿದ್ದ, ಇಂದಿನ ಒತ್ತಡದ ಜೀವನದಲ್ಲಿ ಆರೋಗ್ಯದ ಕಡೆ ನಿರ್ಲಕ್ಷ್ಯ ಮಾಡುತ್ತಿರುವುದು ಕಂಡು ಬಂದಿದೆ. ನಿಮ್ಮ ಮನೆ ಸುತ್ತಮುತ್ತ ತರಕಾರಿಯನ್ನು ಬೆಳೆಸಿ ಸೇವಿಸುವುದು ಆರೋಗ್ಯದ ದೃಷ್ಟಿಯಿಂದ ಉತ್ತಮ ಎಂದು ತಿಳಿಸಿದರು. ಈ ಒಂದು ಕಾರ್ಯಕ್ರಮದಲ್ಲಿ ಹಲವಾರು ಜನ ಭಾಗವಹಿಸಿ ಮಾಹಿತಿ ಪಡೆದುಕೊಂಡರು.

**"ಸುದ್ದಿ ಪತ್ರಿಕೆಯಲ್ಲಿ ಪ್ರಕಟಿಸಲಾದ ಆರ್ಬಿಟ್ ಸಂಸ್ಥೆ ಮತ್ತು ಸೇವಾ ಸಂಘಮ ಸಂಸ್ಥೆ ಕಾರ್ಯಕ್ರಮಗಳು"**

# ಮನೆಯ ಸುತ್ತಮುತ್ತ ಸಸಿ ಬೆಳೆಸಿ ಉಳಿಸಿ:ಮಹಾದೇವಿ




ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ:ಇಂದು ಪ್ರತಿಯೊಬ್ಬರೂ ಮರಗಿಡ ನೆಡುವ ಮೂಲಕ ಪರಿಸರ ಉಳಿಸಬೇಕಾದ ಅವಶ್ಯಕತೆ ಇದೆ ಎಂದು ಆರ್ಬಿಟ್ ಸಂಸ್ಥೆಯ ಅಜೀಮಪ್ರೇಮಜಿಫೌಂಡಶಸಂಯುಕ್ತ ಆಶ್ರಯದ ಮಾನಸಿಕ ಅಸ್ವಸ್ಥರ ಪುನರ್ವಸತಿ ಕಾರ್ಯಕ್ರಮದಿಂದ, ಹುಮನಾಬಾದ ತಾಲ್ಲೂಕಿನ ಕಲ್ಲೂರ ಗ್ರಾಮದ ಸರಕಾರಿ ಪ್ರೌಢ ಶಾಲೆಯ ಆವರಣದಲ್ಲಿ ಶ್ರೀಮಂತಿ ಮಾಹಾದೇವಿ ಸಸಿಗೆ ನಿರೇರೆಯುವ ಮೂಲಕ ಮಾತನಾಡುತ್ತಾ ನುಡಿದರು. ಮರಗಳ ಸಂಖ್ಯೆ ಕಡಿಮೆಯಾಗುತ್ತಾ ಹೋದರೆ ಶುದ್ಧ ಗಾಳಿಯನ್ನೂ ಕೂಡಾ ಹಣ ಕೊಟ್ಟು ಪಡೆಯುವ ಕಾಲ ಬರುತ್ತದೆ. ಅದಕ್ಕಾಗಿ ನಾವು ಎಚ್ಚರಗೊಳ್ಳುವುದು ಅಗತ್ಯ' ಎಂದರು. ನಮ್ಮ ಸುತ್ತ ಮುತ್ತ ಗಿಡ ಮರ ನೆಟ್ಟು ಮುಂದಿನ ಪೀಳಿಗೆಗೆ ಪರಿಸರ ಪ್ರಜ್ಞೆ ಮೂಡಿಸುವ ಜತೆಗೆ ಸ್ವಚ್ಛ ಹಾಗೂ ಹಸಿರು ಪರಿಸರ ಸಂರಕ್ಷಣೆಯ ಧ್ಯೆಯದೊಂದಿಗೆ ಶಿಬಿರದ ವಿದ್ಯಾರ್ಥಿಗಳು ಪಣ ತೊಡಬೇಕಾಗಿದೆ. ಜತೆಗೆ ಪರಿಸರ ಉಳಿಸಿ, ಬೆಳೆಸದಿದ್ದರೆ ಮುಂದಿನ ದಿನ ಕುಡಿಯುವ ನೀರಿಗಾಗಿ ಪರಿತಪಿಸಬೇಕಾಗುತ್ತದೆ ಎಂದರು. ತಮ್ಮ ತಮ್ಮ ಮನೆಯ ಅಂಗಳದಲ್ಲಿ ಹಾಗೂ ಸುತ್ತಮುತ್ತ ಗಿಡಗಳನ್ನು ಹಚ್ಚಿ ಬೆಳೆಸಿ ಎಂದು ಕಿವಿ ಮಾತು ಹೇಳಿದರು. ಸಂಯೋಜಕರಾದ ಪ್ರವಿಣ ಮಾತನಾಡಿ, 'ಮರ ನೆಟ್ಟರೆ ಸಾಲದು ಅದನ್ನು ಬೆಳೆಸಿ ದೊಡ್ಡದನ್ನಾಗಿ ಮಾಡಿ ನಾಲ್ಕು ಜನರಿಗೆ ಹಣ್ಣು, ನೆರಳು ನೀಡಿದಾಗ ಮಾತ್ರ ನಾವು ಮಾಡಿದ ಕಾರ್ಯ ಸಾರ್ಥಕವಾಗುತ್ತದೆ' ಎಂದು ಹೇಳಿದರು. 'ಮರಗಿಡಗಳ ನಾಶದಿಂದ ಬರಗಾಲ ಎದುರಿಸುವಂತಾಗಿದೆ. ಪರಿಸರ ನಾಶದಿಂದ ಮಳೆ ಕಡಿಮೆಯಾಗುವುದರ ಜೊತೆ ಉತ್ತಮ ಗಾಳಿ ಸಿಗುವುದಿಲ್ಲ. ಇದರಿಂದ ಮನುಷ್ಯ ವಿವಿಧ ರೋಗಗಳಿಗೆ ತುತ್ತಾಗುತ್ತಿದ್ದಾನೆ' ಎಂದರು. ಪರಿಸರ ನಾಶದಿಂದ ಮಳೆ ಬರುವುದಿಲ್ಲ. ಮಳೆ ಬಾರದೆ ಇದ್ದರೆ ವಿದ್ಯುತ್ ಉತ್ಪಾದನೆಯಾಗುವುದಿಲ್ಲ.

ಒಂದಕ್ಕೊಂದು ಸಂಬಂಧ ಇರುವುದರಿಂದ ಮರಗಿಡಗಳನ್ನು ಬೆಳಸುವುದು ಅವಶ್ಯ' ಎಂದರು. ಪರಿಸರ ಸಂರಕ್ಷಣೆಗೆ ಪ್ರತಿಯೊಬ್ಬರು ಮನೆಗಳ ಮುಂದೆ ಒಂದೊಂದು ಗಿಡ ನೆಡುವ ಹವ್ಯಾಸ ಬೆಳೆಸಿಕೊಳ್ಳುವಂತದಾಗ ಪರಿಸರ ರಕ್ಷಿಸಲು ಸಾಧ್ಯ ಎಂದರು. ಮುಖ್ಯ ಗುರುಗಳಾದ ಕರುಣಾದೇವಿ, ಸಹ ಶಿಕ್ಷಕಿಗಳಾದ ಆರೀಮತಿ ಲಕ್ಷ್ಮೀ, ಉಜ್ವಲಾ ಗಿರಿ, ಶ್ರೀಮತಿ ಗೌರಮ್ಮಸಿ ಬಾಲಕುಂದೆ, ಶ್ರೀಮತಿ ರೇಣುಕಾ, ಸಹ ಶಿಕ್ಷಕ ರವೀಂದ್ರಕುಮಾರ, ಸುರೇಶ, ದೈಹಿಕ ಶಿಕ್ಷಕ ವೀರೇಂದ್ರ, ಹಾಗೂ ಕಮಲಾಬಾಯಿ ಬಸವರಾಜ್ ಇದ್ದರು.

# ಬಿತ್ತನೆಗೆ ಮುನ್ನ ತಪ್ಪದೇ ಬೀಜೋಪಚಾರ ಮಾಡಿ



ಕಲಬುರಗಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಕೃಷಿ ವಿಜ್ಞಾನಿಗಳ ಸಮ್ಮುಖದಲ್ಲಿ ಕೃಷಿ ಸಖಿಯರಿಗೆ ಬೀಜೋಪಚಾರದ ಕುರಿತು ಪ್ರಾತ್ಯಕ್ಷಿಕೆ ಮತ್ತು ತರಬೇತಿ ನೀಡಲಾಯಿತು.

■ **ವಿಕ ಸುದ್ದಿಲೋಕ** ಕಲಬುರಗಿ

ಇಲ್ಲಿನ ಕೃಷಿ ವಿಜ್ಞಾನ ಕೇಂದ್ರದಲ್ಲಿ ವಿಜ್ಞಾನಿಗಳ ಸಮ್ಮುಖದಲ್ಲಿ ಕೃಷಿ ಸಖಿಯರಿಗೆ ಬೀಜೋಪಚಾರದ ಕುರಿತು ಪ್ರಾತ್ಯಕ್ಷಿಕೆ ತರಬೇತಿ ನೀಡಲಾಯಿತು.

ಈ ವೇಳೆ ಕೆವಿಕೆಯ ಸಸ್ಯರೋಗದ ವಿಜ್ಞಾನಿ ಡಾ.ಜಹೀರ್ ಅಹ್ಮದ್ ಮಾತನಾಡಿ, ಜಿಲ್ಲೆಯಲ್ಲಿ ಈ ಬಾರಿ ಉತ್ತಮ ಮಳೆಯಾಗಿದ್ದು, ರೈತರು ಬಿತ್ತನೆಗೆ ಮುನ್ನ ತಪ್ಪದೇ ಬೀಜೋಪಚಾರ ಮಾಡಿ ಬಿತ್ತನೆ ಮಾಡಬೇಕು ಎಂದರು.

ಉತ್ತಮ ಬೀಜಗಳ ಆಯ್ಕೆ ಉತ್ತಮ ಇಳುವರಿಗೆ ತಳಹದಿ ಕಾರಣ. ರೈತರು ತರಬೇತಿಯಲ್ಲಿ ಪಡೆದ ತಾಂತ್ರಿಕ ಜ್ಞಾನವನ್ನು ತಮ್ಮ ಕ್ಷೇತ್ರದಲ್ಲಿ ಅಳವಡಿಸಿಕೊಳ್ಳಬೇಕು. ಕೆಲವೊಂದು ತಾಲೂಕುಗಳಲ್ಲಿ ಹೆಸರು, ಉದ್ದು ಬಿತ್ತನೆ ಪೂರ್ಣಗೊಂಡಿದ್ದು, ಜಿಲ್ಲೆಯ ಮುಖ್ಯ ಬೆಳೆಯಾದ ತೊಗರಿ ಪ್ರಸ್ತುತ ಬಿತ್ತನೆ ಕಾರ್ಯ ಪ್ರಾರಂಭವಾಗಿದೆ ಎಂದರು.

ಮುಂಗಾರು ಬಿತ್ತನೆಯೂ ಭೂಮಿಯ ತೇವಾಂಶ, ಮಣ್ಣಿನ ಗುಣಧರ್ಮ, ಬೀಜದ ಮೊಳಕೆ ಸಾಮರ್ಥ್ಯ, ರೋಗರಹಿತ ಮೊಳಕೆಯೊಡೆವಿಕೆ, ಹವಾಮಾನ ಸನ್ನಿವೇಶ ಹಾಗೂ ಮಣ್ಣಿನ ಫಲವತ್ತತೆ ಇದ್ದರೆ ಉತ್ತಮ ಬೆಳೆ ಬರುತ್ತದೆ. ಸೋಯಾಬೀನ್ ಮತ್ತು ಅರಿಶಿಣ ಬೆಳೆಗೆ ಉತ್ತಮ ಭೂಮಿಯ ತೇವಾಂಶ ಅಗತ್ಯ. ಬೀಜಗಳಿಂದ ಹಾಗೂ ಮಣ್ಣಿನಿಂದ ಬರುವ ರೋಗ ಹತೋಟಿಗೆ ಜೈವಿಕ ಮತ್ತು ಶಿಲೀಂದ್ರನಾಶಕ ಬೀಜೋಪಚಾರ ಅತ್ಯಗತ್ಯ ಇದೆ ಎಂದರು. ಕನ್ಯಾಕುಮಾರಿ, ಚೈತನ್ಯ, ವಿಜಯಾನಂದ, ಕೆವಿಕೆಯ ಕ್ಷೇತ್ರ ಸಹಾಯಕ ನಾಗಣ್ಣ ಹರಸೂರ ಹಾಗೂ ವಿವಿಧ ಪಂಚಾಯಿತಿಗಳ ಕೃಷಿ ಸಖಿಯರು ಇದ್ದರು.

ರೈತರು ಪ್ರಮಾಣೀಕೃತ ಬೀಜಗಳನ್ನು ಅಂಗೀಕೃತ ಸಂಸ್ಥೆಗಳಿಂದ ಖರೀದಿಸಬೇಕು. ತೊಗರಿ, ಸೋಯಾಬೀನ್, ಉದ್ದು, ಹೆಸರು, ಹತ್ತಿ ಜಿಲ್ಲೆಯ ಮುಖ್ಯ ಬೆಳೆಗಳಾಗಿದ್ದು, ರೈತರು ಕೆವಿಕೆ ತಜ್ಞರಿಂದ ಸೂಕ್ತ ಮಾಹಿತಿ ಪಡೆದು ಬೆಳೆ ನಿರ್ವಹಣೆ ಮಾಡಬೇಕು.

**-ಡಾ.ರಾಜು ತೆಗ್ಗಳ್ಳಿ**, ಕೆವಿಕೆ ಮುಖ್ಯಸ್ಥ




ಕಲಬುರಗಿ: ನಂದಿಕೂರ ಗ್ರಾಮಪಂಚಾಯತ್‌ಯಲ್ಲಿ ವಿಶ್ವ ಪರಿಸರ ದಿನ ಅಂಗವಾಗಿ ಸಸಿ ನೆಡಲಾಯಿತು. ಗ್ರಾ.ಪಂ. ಅಧ್ಯಕ್ಷ ಚಂದ್ರಕಾಂತ್ ಸೀತಾನೂರ್, ಕುಪೇಂದ್ರ ವರ್ಮಾ, ಶಾಂತಕುಮಾರ ಡಿ ಬಿರಾದಾರ, ವಿಠಲ್ ಚವ್ಹಾಣ, ಶ್ರೀನಿವಾಸ್ ದೊಡ್ಡಮನಿ, ಆರಿಫ್ ಸೀತಾನೂರ, ಜೈಭೀಮ ಉದನೂರ, ಹಜರತ್ ಸಾಬ್, ರಾಜು ಬಾಯಿ, ಸಂದೀಪ್ ಗುತ್ತೇದಾರ್, ಸದಾನಂದ, ಮಾಹಂದ ಸಿಂಗೆ ಸೇರಿದಂತೆ ಗ್ರಾಮಸ್ಥರು, ಸಿಬಂದಿ ವರ್ಗದವರು ಇದ್ದರು.

# ORBIT NGO

Non-Governmental Organization
Humnabad, Karnataka

Organization of Bidar Integral Transformation

## Scan this QR Code

## TO DONATE

www.orbitbidar.in

# SEVA SANGAMA

Organization for Social Concern Development

## Scan this QR Code

## TO DONATE

www.sevasangama.in

# ಸೇವಾ ಸಂಗಮ ಮತ್ತು ಆರ್ಬಿಟ್ ಸಂಸ್ಥೆ (NGO)
# ಗುಲ್ಬರ್ಗಾ ಧರ್ಮಕ್ಷೇತ್ರ

## Appeal

ಗುಲ್ಬರ್ಗಾ ಧರ್ಮ ಕ್ಷೇತ್ರವು ಉತ್ತರ ಕರ್ನಾಟಕದ ಹಿಂದುಳಿದ ಜಿಲ್ಲೆಗಳಾದ ಬೀದರ್, ಬಿಜಾಪುರ್, ಯಾದಗಿರಿ ಹಾಗೂ ಗುಲ್ಬರ್ಗಾ ಜಿಲ್ಲೆಗಳನ್ನು ಒಳಗೊಂಡಿದೆ. ಗುಲ್ಬರ್ಗಾ ಧರ್ಮಕ್ಷೇತ್ರವು ಉಗಮ ಆಗುವುದಕ್ಕಿಂತ ಮುಂಚೆ ಮಂಗಳೂರು ಧರ್ಮಕ್ಷೇತ್ರದಿಂದ ಗುರುಗಳು ಹಾಗೂ ಕನ್ಯಾ ಭಗಿನಿಯರು ಬೀದರ್ ಜಿಲ್ಲೆಯ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸಿದ್ದಾರೆ. ಆರ್ಬಿಟ್ ಸಮಾಜ ಸೇವಾ ಸಂಸ್ಥೆಯ ಮುಖಾಂತರ *1993* ರಿಂದ ಆರೋಗ್ಯ, ಶಿಕ್ಷಣ, ಮಹಿಳಾ ಸಬಲೀಕರಣ, ಅಂಗವಿಕಲರ ಸಬಲೀಕರಣ ಹಾಗೂ ನಿರ್ಗತಿಕರಿಗೆ ಆಸರೆ ಒದಗಿಸುವ ಕೆಲಸವನ್ನು ಮಾಡಿದ್ದಾರೆ. ಹಾಗೆ *2005*ನೇ ಇಸವಿಯಲ್ಲಿ ಗುಲ್ಬರ್ಗಾ ಧರ್ಮಕ್ಷೇತ್ರ ಉಗಮವಾದಾಗಿನಿಂದ ಈ ಸಮಾಜ ಸೇವಾ ಕೆಲಸವನ್ನು ನಾಲ್ಕು ಜಿಲ್ಲೆಗಳಲ್ಲಿ ಕೈಗೊಳ್ಳಲಾಯಿತು. ಸೇವಾ ಸಂಗಮ ಹಾಗೂ ಆರ್ಬಿಟ್ ಸಂಸ್ಥೆಗಳ ಮುಖಾಂತರ ಮಹಿಳಾ ಸಬಲೀಕರಣ, ಮಕ್ಕಳ ಶಿಕ್ಷಣ, ಅಂಗವಿಕಲರ ಕಾರ್ಯಕ್ರಮ, ಪರಿಸರ ಸಂರಕ್ಷಣೆ, ನಿರುದ್ಯೋಗಿಗಳಿಗೆ ಕೌಶಲ್ಯ ತರಬೇತಿ, ಮಾನಸಿಕ ಅಸ್ವಸ್ಥರಿಗೆ ಪುನರ್ವಸತಿ, ಎಂಟು ವರ್ಷಕ್ಕಿಂತ ಕೆಳಗಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿದ ಮಕ್ಕಳಿಗೆ ಚಿಕಿತ್ಸೆ, ನೈಸರ್ಗಿಕ ವಿಪತ್ತು ನಿವಾರಣೆ, ಕ್ಯಾನ್ಸರ್ ಜಾಗೃತಿ ಆಂದೋಲನ, ಹೀಗೆ ಸಮಾಜದಿಂದ ಹಂಚಿಕೆ ತಳ್ಳಲ್ಪಟ್ಟ ಜನರಿಗೆ ಪುನರ್ವಸತಿ ನೀಡುವ ಕೆಲಸವನ್ನು ಈ ಎರಡು ಸಂಸ್ಥೆಗಳು ಮಾಡುತ್ತಿವೆ. ಹಲವಾರು ಕಾರ್ಯಕ್ರಮಗಳ ಮುಖಾಂತರ ನಮ್ಮ ಎರಡು ಸಂಸ್ಥೆಗಳು ಬಡವರಿಗೆ, ನಿರ್ಗತಿಕರಿಗೆ, ಶೋಷಿತರಿಗೆ, ಹಾಗೂ ವಿವಿಧ ಶೋಷಣೆಗಳಿಗೆ ಒಳಗಾದ ಜನರಿಗೆ ಸ್ಫೂರ್ತಿ, ಶಕ್ತಿ, ಹಾಗೂ ಜೀವವನ್ನು ತುಂಬುತ್ತವೆ. ಈ ಸೇವೆಗಳನ್ನು ಹೆಚ್ಚು ಜನರಿಗೆ ತಲುಪಿಸಲು,
ನಿಮ್ಮ ಸಹಾಯ ಹಸ್ತವನ್ನು ಹಾಗೂ ನಮ್ಮೊಂದಿಗೆ ಸೇರಿ ಸುಂದರ ಸಮಾಜವನ್ನು ಕಟ್ಟಲು ನಿಮ್ಮ ನೆರವನ್ನು ಅಪೇಕ್ಷಿಸುತ್ತೇವೆ.
ಬನ್ನಿ ಉತ್ತಮ ಸಮಾಜವನ್ನು ಕಟ್ಟೋಣ.





**TO DONATE, SCAN THE QR CODE**

ನಿಮ್ಮ ಸಹಾಯದಿಂದ ಗುಲ್ಬರ್ಗಾ ಹಾಗೂ ಬೀದರ, ಕೋಳಗೇರಿ ನಿವಾಸ ಮಕ್ಕಳು ಉತ್ತಮ ಶಿಕ್ಷಣ ಪಡೆಯುತ್ತಾರೆ.

ನಿಮ್ಮ ಸಹಾಯದಿಂದ ವಿಶೇಷ ಚೇತನ ಮಕ್ಕಳು ತಮ್ಮ ಸಾಮರ್ಥ್ಯ ಹಾಗೂ ಕೌಶಲ್ಯಗಳು ಕಂಡುಕೊಳ್ಳುತ್ತಾರೆ.

**ಪ್ರಾಯೋಜಕರು ಒಂದು ಟ್ಯೂಷನ್ ಸೆಂಟರ್ ಪ್ರತಿ ತಿಂಗಳು 4000/– ವರ್ಷಕ್ಕೆ 40,000/–**

**ಪ್ರಾಯೋಜಕರು ಒಂದು ಮಗು ರೂ.500 ಪ್ರತಿ ತಿಂಗಳು / ವರ್ಷಕ್ಕೆ 6000/–**

ನೀವು ಧನ ಸಹಾಯ ಮಾಡಿದ ಮೇಲೆ ನಿಮ್ಮ ವಿಳಾಸ ಮತ್ತು *PAN number* ಕೆಳಗಿರುವ ಸಂಖ್ಯೆಗೆ *WhatsApp* ಮಾಡುವುದು.

**(Only for Indian Citizens)**

**Bank Account Details**

| | |
|---|---|
| Name | : Sevasangama Development Society |
| Account No | : 16040100022902 |
| IFSC Code | : FDRL0001604 |
| Bank | : Federal Bank |
| Branch | : Super Market Kalaburagi |

Fr. Victor Anil Vas
Director, Seva Sangama & ORBIT


Address

Seva Sangama Development Society, Near Kendriya Vidyalaya, Kotnoor D, Kalaburagi, Karnataka-585102
Contact: 8660968063 / 9743112739 - Email: sevasangama2006@gmail.com / Website: www.sevasangama.in